بِسْمِ اللّٰهِ الرَّحْمٰنِ الرَّحِيْمِ   نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ   وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ವಾರ್ಷಿಕ ಶುಲ್ಕ ರೂ.575/-

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 33

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

19 ಆಗಸ್ಟ್ 2021, 19 ಝುಹೂರ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
09 ಮುಹರ್ರಮ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ الَّذِيْنَ اٰمَنُوْا وَالَّذِيْنَ هَادُوْا
وَالصّٰبِـُٔوْنَ وَالنَّصٰرٰى مَنْ اٰمَنَ بِاللّٰهِ
وَالْيَوْمِ الْاٰخِرِ وَعَمِلَ صَالِحًا فَلَا خَوْفٌ
عَلَيْهِمْ وَلَا هُمْ يَحْزَنُوْنَ (المائدہ:70)

**(ಅಲ್‌ಮಾಇದ: 70)**

**ಅಂದರೆ: ಖಂಡಿತವಾಗಿಯೂ ವಿಶ್ವಾಸಿಗಳಿಗೂ ಹಾಗೂ ಯಹೂದ್ಯರು, ಸಾಬಿಗಳು, ಕ್ರೈಸ್ತರು (ಇವರ ಪೈಕಿ) ಯಾರೇ ಆಗಲಿ, ಪ್ರಾಮಾಣಿಕವಾಗಿ ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಟ್ಟು, ಸತ್ಕಾರ್ಯಗಳನ್ನು ಮಾಡಿದರೆ ಅವರಿಗೂ ಯಾವ ಭಯವೂ ಉಂಟಾಗಲಾರದು. ಅವರಿಗೆ ಯಾವ ಶೋಕವೂ ಇರಲಾರದು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಮಯಾಧಾರಿತ ಸಂಪತ್ತು ಖರ್ಚು ಮಾಡುವವರ ಮತ್ತು ಇತರರಿಗೆ ಜ್ಞಾನ ಕಲಿಸುವವರ ಶ್ರೇಷ್ಠತೆ.

(1409) ಹ‌ಝ್ರತ್ ಇಬ್ನು ಮಸ್‌ಊದ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ನಬಿ(ಸ) ಅವರಿಂದ ಆಲಿಸಿರುತ್ತೇನೆ. ಅವರು ನುಡಿದರು. ಅಸೂಯೆ ಪಡಬಾರದು. ಆದರೆ ಇಬ್ಬರ (ಮನುಷ್ಯರ) ಮೇಲೆ ಮಾತ್ರ. ಒಂದು, ವ್ಯಕ್ತಿಯೊಬ್ಬನಿಗೆ ಅಲ್ಲಾಹನು ಸಂಪತ್ತು ನೀಡಿರಬೇಕು ಮತ್ತು ಅದನ್ನು ಸಾಂಧರ್ಭಿಕವಾಗಿ ಖರ್ಚು ಮಾಡುವ ಭಾಗ್ಯ ಪಡೆದಿರಬೇಕು. ಮತ್ತು ಆ ವ್ಯಕ್ತಿ ಅವನಿಗೆ ಅಲ್ಲಾಹನು ಸರಿಯಾದ ಜ್ಞಾನ ನೀಡಿರಬೇಕು ಅವನು ಅದರ ಮೇಲೆ ಸ್ವಯಂ ಪಾಲಿಸುವವನಾಗಬೇಕು. ಮತ್ತು ಜನರಿಗೆ ಸಹ ಕಲಿಸಬೇಕು.

### ಸದ್‌ಖಾ ಝಕಾತ್ (ದಾನ) ಪರಿಶುದ್ಧ ಸಂಪತ್ತಿನಿಂದ ನೀಡಬೇಕು.

(1410) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್ (ಸ) ನುಡಿದರು. ಯಾವ ವ್ಯಕ್ತಿ ತನ್ನ ಪರಿಶುದ್ಧ ಸಂಪತ್ತಿನಿಂದ ಒಂದು ಖರ್ಜೂರದಷ್ಟು ಸದ್‌ಖಾ ನೀಡುವನೋ ಅಲ್ಲಾಹನು ಪರಿಶುದ್ಧ ವಸ್ತುವೇ ಸ್ವೀಕರಿಸುವನು, ಅಲ್ಲಾಹನು ಆ ಸದ್‌ಖಾವನ್ನು ತನ್ನ ಬಲಗೈಯಿಂದ ಸ್ವೀಕರಿಸುವನು ಮತ್ತು ಸದ್‌ಖಾ ನೀಡುವವನಿಗೆ ಇನ್ನಷ್ಟು ಅನುಗ್ರಹಿಸುತ್ತಾನೆ. ಯಾವ ರೀತಿ ಒಬ್ಬನು ತನ್ನ ಹಸುವನ್ನು ಸಾಕಿರುತ್ತಾನೆ. ಆ ಸದ್‌ಖಾ ಪರ್ವತ ಸಮಾನವಾಗುತ್ತದೆ. **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝುಕಾತ್, ಮುದ್ರಣ 2008 ಖಾದಿಯಾನ್)**

## ಇನ್ನಮಾ ಯಖ್‌ಶಲ್ಲಾಹ್ ಮಿನ್ ಇಬಾದಿಹಿಲ್ ಉಲಮಾಉ
## “ದೈವಿಕ ಲೋಕ” ಎಂಬ ತಾತ್ಪರ್ಯ ಯಾವಾಗಲೂ ಅಲ್ಲಾಹನ ಭಯ ಹೊಂದಿದವನು ಮತ್ತು ನಾಲಿಗೆಯಿಂದ ನಿರರ್ಥಕ ಪದಗಳು ಹೊರಬರದಂತಹ ವ್ಯಕ್ತಿಯಾಗಿರುತ್ತಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ದೈವಿಕ ಲೋಕವೆಂದರೆ ಕೇವಲ ವ್ಯಾಕರಣ ಭಾಷೆಗೆ ಸೀಮಾತೀತವಾದುದಲ್ಲ. ಬದಲು ದೈವಿಕ ಲೋಕದ ವ್ಯಕ್ತಿ ಯಾವಾಗಲೂ ಅಲ್ಲಾಹನ ಭಯ ಹೊಮದಿದವನಾಗುವನು ಮತ್ತು ಅವನ ನಾಲಿಗೆಯಿಂದ ಅಪಶಬ್ಧಗಳು ಹೊರಡುವುದಿಲ್ಲ. ಆದರೆ ಇಂದು ಎಂತಹ ಕಾಲ ಬಂದೊದಗಿದೆ ಎಂದರೆ ಮೃತ ಶರೀರದಂತಿರುವವರು ಸಹ ಉಲಮಾಗಳೆನಿಸಿಕೊಳ್ಳುತ್ತಿದ್ದಾರೆ. ಮತ್ತು ಈ ಪದವನ್ನು ನಮ್ಮ ಸ್ವಂತ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾರೆ, ಹೀಗೆ ಈ ಪದವನ್ನು ಅಪಮಾನಿಸಲಾಗಿದೆ ಮತ್ತು ಅಲ್ಲಾಹನ ಆಶಯ ಮತ್ತು ಉದ್ದೇಶಗಳಿಗೆ ವಿರುದ್ಧವಾದ ಭಾವ ಹೊಂದಲಾಗಿದೆ. ಏಕೆಂದರೆ ಪವಿತ್ರ ಖುರ್‌ಆನ್ ಉಲಮಾಅ ಗುಣಗಳನ್ನು ಹೀಗೆ ವಿವರಿಸಿದೆ. **ಇನ್ನಮಾ ಯಖ್‌ಶಲ್ಲಾಹ್ ಮಿನ್ ಇಬಾದಿಹಿಲ್ ಉಲಮಾಉ** (ಫಾತಿರ್-29) ಅರ್ಥಾತ್: ಅವನ ದಾಸರ ಬಗ್ಗೆ ಜ್ಞಾನವುಳ್ಳವರು ಮಾತ್ರ ಅಲ್ಲಾಹನಿಗೆ ಭಯಪಡುತ್ತಾರೆ. ಈ ಮಾನದಂಡದ ಅನ್ವಯ ನೋಡುವುದಾದರೆ ಯಾರಲ್ಲಿ ಅಲ್ಲಾಹನ ಭಯ ಭಕ್ತಿಯ ಗುಣಗಳಿಲ್ಲವೋ ಅವರು ಎಂದಿಗೂ ಈ ಬಿರುದಿಗೆ ಅರ್ಹರಾಗುವುದಿಲ್ಲ.

ವಾಸ್ತವವಾಗಿ ಹೇಳಬೇಕೆಂದರೆ “ಉಲಮಾಅ” ಶಬ್ಧವು ‘ಆಲಿಮ್ ಶಬ್ಧದ ಬಹುವಚನ ರೂಪವಾಗಿದೆ. ಇಲ್ಮ್ (ಜ್ಞಾನ) ನಿಶ್ಚಿತವಾದ ಮತ್ತು ನಿಖರವಾದ ಜ್ಞಾನಕ್ಕೆ ಅನ್ವಯವಾಗುತ್ತದೆ. ಸತ್ಯವಾದ ಜ್ಞಾನವು ಪವಿತ್ರ ಖುರ್‌ಆನ್‌ನಿಂದ ದೊರೆಯುತ್ತದೆಯೇ ಹೊರತು ಯುನಾನಿ ತತ್ವಜ್ಞಾನಿಗಳಿಂದ ದೊರೆಯುವಂತಹದ್ದಲ್ಲ. ಪ್ರಸಕ್ತ ಇಂಗ್ಲೆಂಡಿನ ತತ್ವಜ್ಞಾನದಿಂದಲೂ ದೊರೆಯುವಂತಹದ್ದಲ್ಲ. ಬದಲು ಸತ್ಯವಿಶ್ವಾಸದ ತತ್ವಜ್ಞಾನದಿಂದ ಪಡೆಯಬಹುದಾಗಿದೆ. ಆ ಸ್ಥಾನ ಪಡೆಯುವುದೇ ಸತ್ಯವಿಶ್ವಾಸಿಯ ಗುರಿಯಾಗಿರುತ್ತದೆ. ಅವರೇ ಉಲಮಾಅ ಎನಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಅವರು ನಿಶ್ಚಿತವಾದ ಜ್ಞಾನ ಹೊಂದಿರುತ್ತಾರೆ. ಅದು ಜ್ಞಾನದ ಶ್ರೇಷ್ಠ ದರ್ಜೆಯಾಗಿದೆ. ಆದರೆ ಯಾವ ವ್ಯಕ್ತಿ ಸತ್ಯವಾದ ಜ್ಞಾನಗಳಿಂದ ತಿಳುವಳಿಕೆ ಹೊಂದಿರುವುದಿಲ್ಲ ಮತ್ತು ಆಧ್ಯಾತ್ಮಿಕ ಜ್ಞಾನ ಹಾಗೂ ದೈವಿಕ ಮಾರ್ಗಗಳ ಜ್ಞಾನ ಹೊಂದಿರುವುದಿಲ್ಲ, ಸ್ವಯಂ ಅವರು ತಮ್ಮನ್ನು ತಾವೇ ಪಂಡಿತ (ಆಲಿಮ್) ಎಂದು ಕರೆಯಿಸಿಕೊಂಡರು. ಆದರೆ ಜ್ಞಾನದ ಗುಣಗಳು, ಕರ್ಮಗಳಿಂದ, ಪ್ರಕಾಶ ಮತ್ತು ಜ್ಯೋತಿಯಂತೆ ಯಥಾರ್ಥ ಜ್ಞಾನವಾಗಿರುತ್ತದೆ ಅದು ಅವರಲ್ಲಿ ಇರುವುದಿಲ್ಲ. ಅಂತಹ ಜನರು ಖಂಡಿತವಾಗಿಯೂ ನಷ್ಟ ಹೊಂದುವವರಾಗಿರುತ್ತಾರೆ. ಅವರುಗಳು ತಮ್ಮ ಪರಲೋಕವನ್ನು ಅಂಧಕಾರದಿಂದ ತುಂಬಿಕೊಂಡಿರುತ್ತಾರೆ. ಅವರ ಬಗ್ಗೆಯೇ ಅಲ್ಲಾಹನು ಹೇಳಿರುವನು. **ಮನ್ ಕಾನ ಫೀ ಹಾಝಿಹಿ ಆಮ ಫಹುವ ಫಿಲ್-ಆಖಿರತಿ ಅಮ** (ಬನಿಈಸ್ರಾಯೀಲ್-73) ಯಾರು ಇಹಲೋಕದಲ್ಲಿ ಅಂಧನಾಗಿರುವನೋ ಅವನು ಪರಲೋಕದಲ್ಲೂ ಅಂಧನಾಗುವನು. ಯಾರಿಗೆ ಜ್ಞಾನದ ಅರಿವು ಮತ್ತು ದೈವಿಕ ಜ್ಞಾನ ದೊರೆತಿಲ್ಲ. ಅಲ್ಲಿ ಯಾವ ಜ್ಞಾನ ದೊರೆಯಲು ಸಾಧ್ಯವಾದೀತು. ಅಲ್ಲಾಹನನ್ನು ದರ್ಶಿಸುವ ದೃಷ್ಟಿ ಇಹಲೋಕದಿಂದಲೇ ಪಡೆದು ಹೋಗಬೇಕಾಗುತ್ತದೆ. ಇಲ್ಲಿ ಅಂತಹ ದೃಷ್ಟಿ ಪಡೆಯದವನಿಗೆ ಅಲ್ಲಾಹನು ಅಲ್ಲಿ ದಯಪಾಲಿಸುವನು ಎಂಬ ಆಶಯ ನಿರರ್ಥಕವಾಗಿದೆ.

**(ಮಲ್ಫೂಝಾತ್ ಸಂಪುಟ-1, ಪುಟ-317, ಮುದ್ರಣ 2018 ಖಾದಿಯಾನ್).**

**ಹಲವು ಪಾಪಗಳಿಗೆ ಕಾರಣ ಸಂತಾನದ ಪ್ರೇಮದಿಂದಾಗಿರುತ್ತದೆ. ಸಂತಾನವನ್ನು ಕೆಡಿಸುವಂತಹ ಪ್ರೇಮ, ಪ್ರೇಮವಲ್ಲ ಶತ್ರುತನವಾಗಿದೆ.**
**ಹಝ್ರತ್ ಇಬ್ರಾಹಿಂ(ಅ) ನಮಗೆ ಉಪದೇಶ ನೀಡಿದ್ದಾರೆ. ಮಕ್ಕಳೊಂದಿಗಿನ ಪ್ರೀತಿ ಅವರು ದುರ್ಮಾರ್ಗ ಹಿಡಿಯದ ರೀತಿಯಲ್ಲಿರಬೇಕಾಗಿದೆ.**
**ನಾವು ಸಂತಾನದ ಪ್ರೀತಿಗಿಂತ ಹೆಚ್ಚು ಅಲ್ಲಾಹನ ಪ್ರೀತಿಗೆ ಆಧ್ಯತೆ ಕೊಡಬೇಕಾಗಿದೆ. ಇದು ಕೇವಲ ಅಲ್ಲಾಹನ ಸಂಪ್ರೀತಿಗೆ ಕಾರಣವಾಗುವುದಿಲ್ಲ ಬದಲು ತನ್ನ ಸಂತಾನದ ಸುರಕ್ಷತೆಯ ಮಾರ್ಗವು ಆಗಿರುತ್ತದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಇಬ್ರಾಹೀಂನ ವಚನ 374 **ರಬ್ಬಿ ಇನ್ನ ಹುನ್ನ ಅಝ್‌ಲಲ್‌ನ ಕಸೀರಮ್ಮಿನನ್ನಾಸಿ, ಫಮನ್ ತಬಿಅನಿ ಫಇನ್ನಹೂ ಮಿನ್ನಿ, ವಮನ್ ಅಸಾನಿ ಫಇನ್ನಕ ಗಫೂರುರ್ರಹೀಮ್** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ:

ದೈವ ಪ್ರೀತಿಯ ಎಂತಹ ಪವಿತ್ರ ಉದಾಹರಣೆಯಾಗಿದೆ. ಹಝ್ರತ್ ಇಬ್ರಾಹಿಂ(ಅ) ಹೇಳುತ್ತಾರೆ. ನನ್ನ ಸಂತಾನ ಬಹುದೇವಾರಾಧಕರಾಗಲಿಲ್ಲ ಎಂದರೆ ನನ್ನ ಸಂತಾನವಾಗಿದೆ ಇಲ್ಲದಿದ್ದರೆ ಇಲ್ಲ. ಈ ವಚನದಿಂದ ಮತ್ತೊಂದು ವಿಷಯ ತಿಳಿದುಬರುವುದೇನೆಂದರೆ ಹಲವು ಪಾಪಗಳಿಗೆ ಕಾರಣ ಸಂತಾನದೊಂದಿಗೆ ಇರುವ ಪ್ರೀತಿಯಾಗಿರುತ್ತದೆ. ಹಝ್ರತ್ ಇಬ್ರಾಹಿಂ(ಅ) ನಮಗೆ ಉಪದೇಶ ನೀಡಿದ್ದಾರೆ. ಸಂತಾನದೊಂದಿಗಿನ ಪ್ರೀತಿ ಅವರು ದುರ್ಮಾರ್ಗ ಹಿಡಿಯದ ರೀತಿಯಲ್ಲಿರಬೇಕಾಗಿದೆ. ಸಂತಾನವನ್ನು ಕೆಡಿಸುವಂತಹ

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی العَالَمِ ۞ شَرُّ السُّمُوْمِ عَدَاوَةُ الصُّلَحَاءِ

## ವಿವಾದದ ನಂತರ ಅಬ್ದುಲ್ ಹಕ್ ಅವರಿಗೆ ಅವಮಾನವಾಗಿಲ್ಲ ಎಂದು ನ್ಯಾಯಾಧೀಶರು ಪ್ರಮಾಣ ಮಾಡಿದರೆ ಮೌಲ್ವಿ ಅಬ್ದುಲ್ ಹಕ್ ಘಜ್ನವಿಗೆ ಐದು ನೂರು ರೂಪಾಯಿಗಳ ಬಹುಮಾನ

ಮೌಲ್ವಿ ಅಬ್ದುಲ್ ಹಕ್ ಘಜ್ನವಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೊತೆಗಿನ ದ್ವೇಷದ ಕುರಿತು ಹಿಂದಿನ ಸಂಚಿಕೆಯಲ್ಲಿ ಉಲ್ಲೇಖಿಸಲಾಗಿದೆ. ಅವರು ಮೇ 27, 1893 ರಂದು ಅಮೃತಸರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಮುಬಾಹಲ (ಪ್ರಾರ್ಥನಾ ಸಮರ) ವನ್ನು ಮಾಡಿದರು. 10 ಝಿಲ್‌ಖಅದಃ 1310 ಹಿಜರಿಯ ಪ್ರಕಾರ. ಹದಿನೆಂಟು ತಿಂಗಳಲ್ಲಿ ಸಾಯದಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಷರತ್ತುಬದ್ಧ ಭವಿಷ್ಯವಾಣಿಯಿಂದ ಲಾಭವನ್ನು ಪಡೆದುಕೊಂಡು, ಅಬ್ದುಲ್ ಹಖ್ ಈ ಭವಿಷ್ಯವಾಣಿಯು ಸುಳ್ಳಾಯಿತು ಮತ್ತು ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಮಾಡಿದ ಆ ಮುಬಾಹಿಲದ ಪರಿಣಾಮವಾಗಿದೆ ಎಂದು ಹೇಳಿದನು. ಮತ್ತು ಮೌಲ್ವಿ ಅಬ್ದುಲ್ ಹಖ್ ಅದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸೋಲು ಅವಮಾನ ಮತ್ತು ತನಗೆ ಗೌರವ ಎಂದು ಘೋಷಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಇದಕ್ಕೆ ಉತ್ತರಿಸುತ್ತ ಹೇಳಿದರು: ಇದು ಮೌಲವಿ ಅಬ್ದುಲ್ ಹಖ್‌ನ ಸುಳ್ಳು ಸಂತೋಷವಾಗಿದೆ. ಭವಿಷ್ಯವಾಣಿಯು ಪ್ರತಿಯೊಂದು ವಿಷಯದಲ್ಲೂ ನಿಜವಾಯಿತು. ಮತ್ತು ಇಸ್ಲಾಮ್ ಧರ್ಮಕ್ಕೆ ದೊಡ್ಡ ವಿಜಯವನ್ನು ನೀಡಲಾಯಿತು ಮತ್ತು ಕ್ರೈಸ್ತ ಧರ್ಮವನ್ನು ತೀವ್ರವಾಗಿ ಸೋಲಿಸಲಾಯಿತು. ಮೌಲ್ವಿ ಅಬ್ದುಲ್ ಹಖ್ ಅವರು ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದ ಈ ಪವಿತ್ರ ಯುದ್ಧದಲ್ಲಿ ಇಸ್ಲಾಮ್ ಮುಕ್ತ ಮತ್ತು ಕ್ರೈಸ್ತ ಧರ್ಮವನ್ನು ವಿಜಯಶಾಲಿ ಎಂದು ಘೋಷಿಸಿದ್ದು ಒಂದು ರೀತಿಯ ಅವಮಾನ ಮತ್ತು ಶಾಪ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಅಬ್ದುಲ್ ಹಖ್ ಮುಬಾಹಲಾದಲ್ಲಿ ಹೀಗೆ ದುಆ ಮಾಡಿದ್ದನು "ಸುಳ್ಳುಗಾರನಾದವನಿಗೆ ಅಲ್ಲಾಹನ ಶಾಪವಿರಲಿ, ಅವನು ಎಲ್ಲಾ ರೀತಿಯ ಅನುಗ್ರಹದಿಂದ ವಂಚಿತನಾಗಲಿ ಮತ್ತು ಇಡೀ ಜಗತ್ತಿನಲ್ಲಿ ಅವನ ಸ್ವೀಕೃತಿಯ ಯಾವುದೇ ಚಿಹ್ನೆ ಇಲ್ಲದಿರಲಿ." ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಇದರ ಕುರಿತು ಸ್ಪಷ್ಟವಾಗಿ ಹೇಳಿದರು: ಮುಬಾಹಲದ ನಂತರ ಮೌಲವಿ ಅಬ್ದುಲ್ ಹಖ್ ಘಜ್ನವಿ ಎಷ್ಟು ಅವಮಾನಗಳು ಮತ್ತು ಶಾಪಗಳನ್ನು ಅನುಭವಿಸಿದರು ಮತ್ತು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸರ್ವಶಕ್ತನಾದ ಅಲ್ಲಾಹನು ಎಷ್ಟು ಗೌರವ ಮತ್ತು ಕೀರ್ತಿ ನೀಡಿದನು. ಮೊದಲು ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅಬ್ದುಲ್ ಹಖ್ ಘಜ್ನವಿಯು ನಡುವೆ ನಡೆದ ವಿವಾದದ ಕುರಿತು ಪ್ರಸ್ತಾಪಿಸುತ್ತೇವೆ ತದನಂತರ ಆ ಮುಬಾಹಲದ ಫಲಿತಾಂಶದಲ್ಲಿ ಮೌಲ್ವಿ ಅಬ್ದುಲ್ ಹಖ್ ಘಜ್ನವಿ ಅವರು ಪಡೆದ ಅವಮಾನಗಳು ಮತ್ತು ಶಾಪಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಅಲ್ಲಾಹನು ನೀಡಿದ ಗೌರವ, ಅನುಗ್ರಹಗಳು ಮತ್ತು ಖ್ಯಾತಿಯನ್ನು ಸಹ ಪ್ರಸ್ತಾಪಿಸುತ್ತೇವೆ.

ಈ ಮುಬಾಹಲಕ್ಕಾಗಿ ಈಜಿಪ್ಟ್‌ನಲ್ಲಿದ್ದ ಅಬ್ದುಲ್ ಹಖ್ ಗಜ್ನವಿ ಕೋರಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅದರ ಉತ್ತರದಲ್ಲಿ ಹೀಗೆ ಬರೆದರು: ಬಿನ್ನಾಭಿಪ್ರಾಯಗಳಿದ್ದಲ್ಲಿ ಮುಬಾಹಲ ಮಾಡುವುದು ಮತ್ತು ಅದರ ಫಲವಾಗಿ ಮುಸ್ಲಿಮರು ಪರಸ್ಪರ ಒಬ್ಬರು ಇನ್ನೊಬ್ಬರನ್ನು ಶಪಿಸುವುದು ಧರ್ಮಸಮ್ಮತವಲ್ಲ. ಅನಂತರ, ಅಲ್ಲಾಹನ ಅನುಮತಿಯೊಂದಿಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅಬ್ದುಲ್ ಹಕ್ ಜೊತೆಗಿನ ಮುಬಾಹಲವನ್ನು ಒಪ್ಪಿಕೊಳ್ಳುವುದಲ್ಲದೆ, ಎಲ್ಲಾ ಅವಿಶ್ವಾಸಿಗಳು ಮತ್ತು ಸುಳ್ಳುಗಾರರಿಗೆ ನನ್ನೊಂದಿಗೆ ಮುಬಾಹಲ ಮಾಡಲು ಸಾಮಾನ್ಯ ಅನುಮತಿಯನ್ನು ನೀಡಿದರು. ಆದಾಗ್ಯೂ, ಅಬ್ದುಲ್ ಹಕ್‌ಅನ್ನು ಅವರು ಶಪಿಸಲಿಲ್ಲ. ಏಕೆಂದರೆ ಅವರು ಅಬ್ದುಲ್ ಹಕ್‌ನ ಈ ಕೃತ್ಯವನ್ನು ಕೇವಲ ಅಜ್ಞಾನದ ಪರಿಣಾಮವೆಂದು ಪರಿಗಣಿಸಿದ್ದಾರೆ.

### ಅಬ್ದುಲ್ ಹಕ್ ಅವರಿಂದ ಮುಬಾಹಿಲದ ಜಾಹೀರಾತು ಮತ್ತು ಭರವಸೆಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರತಿಕ್ರಿಯೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮಿಯಾಂ ಅಬ್ದುಲ್ ಹಖ್‌ರವರ ಜಾಹಿರಾತಿನ ಉತ್ತರದಲ್ಲಿ ಮೌಲ್ವಿ ಅಬ್ದುಲ್ ಜಬ್ಬಾರ್ ಗಜ್ನವಿಗೆ ತನ್ನ ಒಂದು ಪತ್ರದಲ್ಲಿ ಹೀಗೆ ಬರೆದರು:

"ಅಸ್ಸಲಾಮು ಅಲೈಕುಮ್! ಅಬ್ದುಲ್ ಹಖ್ ಸಾಹಿಬ್ ಹೆಸರಿನಲ್ಲಿ ಮುಬಾಹಲದ ಜಾಹೀರಾತನ್ನು ನಿನ್ನೆಯ ಪೋಸ್ಟ್‌ನಲ್ಲಿ ಸ್ವೀಕರಿಸಿದ್ದೇನೆ. ಅಬ್ದುಲ್ ಹಕ್ ಯಾರೆಂದು ನನಗೆ ಗೊತ್ತಿಲ್ಲದ ಕಾರಣ, ಆತ ಯಾವುದೇ ಗುಂಪಿನ ಅನುಯಾಯಿಯಾಗಿದ್ದಾನೆ, ನನ್ನ ಅಭಿಪ್ರಾಯದಲ್ಲಿ ಅವನು ನಿಮ್ಮ ಜಮಾಅತ್ತಿನವನು ಮತ್ತು ಜಾಹೀರಾತು ನಿಜವಾಗಿಯೂ ನಿಮ್ಮದೇ ಎಂದು ಭಾವಿಸಿ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ವಿವಾದದ ಬಗ್ಗೆ ನನಗೆ ಯಾವುದೇ ಆಕ್ಷೇಪವಿಲ್ಲ ಎಂದು ಸ್ಪಷ್ಟಪಡಿಸಿದೆ. ನಿಮ್ಮೊಂದಿಗೆ ವಾದಿಸಲು ನನಗೆ ಯಾವ ಅಭ್ಯಂತರವೂ ಇಲ್ಲ. ನಾನು ವಾದಿಸಲು ಸಿದ್ಧ, ಆದರೆ ಈ ಕೆಳಗಿನ ವಿಷಯಗಳನ್ನು ಮೊದಲು ಇತ್ಯರ್ಥಗೊಳಿಸಬೇಕು:

ಮೊದಲನೆಯದು ಮೌಲ್ವಿ ನಝೀರ್ ಹುಸೇನ್ ಸಾಹೇಬ್ ದೆಹಲ್ವಿ ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬಟಾಲ್ವಿ ಮತ್ತು ಮೌಲ್ವಿ ಅಹ್ಮದುಲ್ಲಾ ಸಾಹಿಬ್ ಅಮೃತಸರಿಯಂತಹ ಮೌಲ್ವಿಗಳು ಒಮ್ಮತದಿಂದ ಈ ಫತ್ವಾವನ್ನು ಬರೆಯಬೇಕು. ಅಂದರೆ ಭಾಗಶಃ ಭಿನ್ನಾಭಿಪ್ರಾಯಗಳಿಗಾಗಿ ಅದರ ನಿರ್ಣಯ ಶಾಪದ ಮೂಲಕ ಮತ್ತು ಒಬ್ಬರು ಇನ್ನೊಬ್ಬರನ್ನು ಪರಸ್ಪರ ಶಪಿಸಬಹುದು ಅದನ್ನು ಅನ್ಯ ಪದಗಳಲ್ಲಿ ಮುಬಾಹಿಲ ಎಂದು ಹೇಳುತ್ತೇವೆ. ಅದು ಧರ್ಮಬದ್ಧ ಎಂದು ಫತ್ವ ಬರೆದು ಕೊಡಬೇಕು ಏಕೆಂದರೆ ನನ್ನ ಅಭಿಪ್ರಾಯದಲ್ಲಿ ಭಾಗಶಃ ಭಿನ್ನಭಿಪ್ರಾಯಗಳಿದ್ದಲ್ಲಿ ಮುಸ್ಲಿಮರನ್ನು ಶಪಿಸುವುದು ಧರ್ಮಬದ್ಧವಲ್ಲ.

ನಮಗೆ......... ಭಯವಿರುವುದೇನಂದರೆ ಒಂದುವೇಳೆ ನಾವು ಮುಸಲ್ಮಾನರ ವಿರುದ್ಧ ಶರಿಅ ಮತ್ತು ಫಿಖ ವಿಧಾನದ ವಿರುದ್ಧ ಶಪಿಸಲು ಅಮೃತಸರಕ್ಕೆ ತಲುಪಿದರೆ, ಮೌಲ್ವಿಗಳು ಮುಸ್ಲಿಮರನ್ನು ಏಕೆ ಶಪಿಸಿದರು ಎಂದು ನನ್ನ ಮೇಲೆ ಆಕ್ಷೇಪಿಸುವರು ಮತ್ತು ಓರ್ವ ಮುಮಿನ್ ಯಾರನ್ನು ಶಪಿಸಲಾರನು ಮತ್ತು ಅವನ ಕೈಯಿಂದ ಹಾಗೂ ನಾಲಿಗೆಯಿಂದ ಜನರು ಸುರಕ್ಷಿತರಾಗಿರುವರು ಎಂಬ ಹದೀಸನ್ನು ಏಕೆ ಬಿಟ್ಟಿರುವರು ಎಂದು ನನ್ನ ಮೇಲೆ ಆಕ್ಷೇಪಿಸುವರು. ತಮ್ಮ ಕೈ ಮತ್ತು ನಾಲಿಗೆಗಳಿಂದ ಸುರಕ್ಷಿತವಾಗಿರುತ್ತಾರೆ. ಆದ್ದರಿಂದ ಮೊದಲು ಒಂದು ಫತ್ವಾ ಬರೆಯುವುದು ಅಗತ್ಯವಾಗಿದೆ. ಈ ಫತ್ವಾಕ್ಕೆ ನಾನು ಈಗಾಗಲೇ ಹೇಳಿದ ಮೂವರು ಮೌಲ್ವಿಗಳು ಸಹಿ ಹಾಕಬೇಕು. ಉಲೆಮಾಗಳ ಸಹಾಯದಿಂದ ಆ ಪ್ರಮಾಣೀಕೃತ ಇಸ್ತಿಫ್ತಾ ನನಗೆ ತಲುಪಿದಾಗ, ಘಜ್ನವಿಯವರು ನನ್ನನ್ನು ಅಮೃತಸರ ತಲುಪಿದ್ದಾರೆ ಎಂದು ಪರಿಗಣಿಸಿದರು. (ಮಜ್‌ಮೂಅ ಇಶ್ತಿಹಾರಾತ್, ಸಂಪುಟ–1, ಪುಟ–225, ಮುದ್ರಣ ಖಾದಿಯನ್ 2019)

### ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉತ್ತರಕ್ಕೆ ಅಬ್ದುಲ್ ಹಖ್‌ನ ಆಕ್ಷೇಪ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಿಯಾನ್ ಅಬ್ದುಲ್ ಹಖ್ ಸಾಹಿಬ್ ಘಜ್ನವಿಯ ಮೊದಲ ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಮುಬಹಲಾಕ್ಕಾಗಿ ಪ್ರಕಟಿಸಿದರು. ನಾನು ಹೀಗೆ ಉತ್ತರಿಸಿದೆ, ಮುಸ್ಲಿಮರ ಇಂತಹ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿಂದ ಪರಸ್ಪರ ಮುಬಾಹಿಲ ಮಾಡುವುದು ಶರೀಯತ್ತಿನ ಪ್ರಕಾರ ಸರಿಯಲ್ಲ. ಇಸ್ಲಾಮ್ ಧರ್ಮವು ಅಂತಹ ಭಿನ್ನತೆಗಳಿಂದ ತುಂಬಿದೆ....... ಇದರ ಉತ್ತರವಾಗಿ ಮಿಯಾ ಅಬ್ದುಲ್ ಹಖ್ ಸಾಹಿಬ್ ತಮ್ಮ ಇನ್ನೊಂದು ಜಾಹೀರಾತಿನಲ್ಲಿ ನನಗೆ ಬರೆದರು, ಒಂದು ವೇಳೆ ಸಣ್ಣಪುಟ್ಟ ಭಿನ್ನಾಬಿಪ್ರಾಯಗಳ ಕಾರಣ ಮುಬಾಹಲ ಮಾಡುವುದು ಉಚಿತವಲ್ಲವಾದಲ್ಲಿ ನೀವು ಮೌಲವಿ ಇಸ್ಮಾಈಲ್ ಅವರನ್ನು ಫತಹ್ ಇಸ್ಲಾಮ್ ನಿಯತಕಾಲಿಕದಲ್ಲಿ ಏಕೆ ಮುಬಾಹಲಕ್ಕೆ ಅಹ್ವಾನಿಸಿದ್ದೀರಿ? ಇದಕ್ಕೆ ಅವರು ಅರ್ಥ ಮಾಡಿಕೊಳ್ಳಬೇಕಾದ ವಿಷಯವೇನೆಂದರೆ ಆ ಕೋರಿಕೆಯು ಯಾವುದೇ ಸಣ್ಣಪುಟ್ಟ ಭಿನ್ನಭಿಪ್ರಾಯಗಳ ಕಾರಣದಿಂದಾಗಿರಲಿಲ್ಲ. (ಅದೇ ಪುಟಗಳು 230, 231)

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಉಮರ್(ರ) ಹೇಳುತ್ತಿದ್ದರು: ನಾನು ನಮಾಝಿನಲ್ಲಿ ಇರುವಾಗಲೂ ನನ್ನ ಸೈನ್ಯವನ್ನು ತಯಾರು ಮಾಡುತ್ತಿರುತ್ತೇನೆ.**

**ಹಝ್ರತ್ ಉಮರರ ಖಿಲಾಫತ್ ಕಾಲ ಸುಮಾರು ಹತ್ತುವರೆ ವರ್ಷಗಳ ಕಾಲದ್ದಾಗಿತ್ತು......ಹಝ್ರತ್ ಉಮರ್(ರ) ವಿಜಯ ಸಾಧಿಸಿದ ಪ್ರದೇಶಗಳ ಒಟ್ಟು ರಖ್ಬ 23 ಲಕ್ಷ 51 ಸಾವಿರ 30 ಚದುರ ಮೈಲಾಗಿತ್ತು.**

**ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದ್ದ ಒಂದು ಸಂಗತಿಯೇನೆಂದರೆ, ಹಝ್ರತ್ ಉಮರ್(ರ) ಅನೇಕ ಕೆಲಸಗಳಲ್ಲಿ ನಿರತರಾಗಿದ್ದರು ಕೂಡ ಬಹುತೇಕ ಯುದ್ದಗಳಲ್ಲಿ ಮುಸ್ಲಿಮರ ಸೈನ್ಯದಲ್ಲಿ ಇದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನಮಾರಿಖ್ ಮತ್ತು ಕಸ್ಕರ್ ಯುದ್ಧ, ಸಖಾತಿಯಾ, ಬಾರೋಸಮಾ, ಮತ್ತು ಜಿಸರ್ ಯುದ್ಧಗಳಲ್ಲಿ ನಡೆದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

**ನಾಲ್ಕು(4) ದಿವಂಗತರಾದ ಸನ್ಮಾನ್ಯ ಫತೀಹ್ ಅಬ್ದುಸ್ಸಲಾಂ ಮುಬಾರಕ್ ಸಾಹಿಬ್, ಸನ್ಮಾನ್ಯ ಖಲೀಲ್ ಮುಬಶ್ಶಿರ್ ಆಹ್ಮದ್ ಸಾಹಿಬ್‌ರ ಪತ್ನಿಯಾದ ರಝಿಯ ಬೇಗಂ ಸಾಹಿಬ, ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರ ಪತ್ನಿಯಾದ ಸಾಯೆರ ಸುಲ್ತಾನ್ ಸಾಹಿಬ, ಮತ್ತು ಸೀರಿಯದ ಸನ್ಮಾನ್ಯ ಗಸ್‌ವಾನ್ ಅಲ್‌ಮಾರ್ಝ್‌ವಾನಿ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–07–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಉಮರರ ಖಿಲಾಫತ್ ಕಾಲದ ಪ್ರಸ್ತಾಪ ನಡೆಯುತ್ತಿತ್ತು. ಹಿಜರೀ 13ರಿಂದ 23ರ ತನಕ ನಡೆದ ಯುದ್ಧಗಳು ಮತ್ತು ವಿಜಯಗಳ ಕುರಿತು ಚರಿತ್ರೆಯಲ್ಲಿ ಬರೆಯಲಾಗಿದೆ. ಹಝ್ರತ್ ಉಮರರ ಖಿಲಾಫತ್ ಕಾಲ ಸುಮಾರು ಹತ್ತುವರೆ ವರ್ಷಗಳ ಕಾಲದ್ದಾಗಿತ್ತು. ಆ ಕಾಲದಲ್ಲಿ ಉಂಟಾದ ವಿಜಯಗಳ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಾಮ ಶಿಬ್ಲೀ ನುಮಾನಿ ತನ್ನ ಗ್ರಂಥದಲ್ಲಿ ಬರೆಯುತ್ತಾರೆ: ಹಝ್ರತ್ ಉಮರ್(ರ) ವಿಜಯ ಸಾಧಿಸಿದ ಪ್ರದೇಶಗಳ ಒಟ್ಟು ರಖ್ಬ 23 ಲಕ್ಷ 51 ಸಾವಿರ 30 ಚದುರ ಮೈಲಾಗಿತ್ತು. ಹೀಗೆ ವಿಜಯ ಸಾಧಿಸಿದ ಪ್ರದೇಶಗಳು ಹೀಗಿವೆ: ಸಿರಿಯ, ಈಜಿಪ್ಟ್, ಇರಾನ್, ಇರಾಕ್, ಖಝಿಸ್ತಾನ್, ಆರ್ಮನಿಯ, ಆಧರ್‌ಬಾಇಜಾನ್, ಪೇರ್ಶಿಂಯು, ಕರ್‌ಮಾನ್, ಖುರಾಸಾನ್, ಮುಕ್‌ರಾನ್, ಅದರಲ್ಲಿ ಬಲೂಚಿಸ್ತಾನದ ಕೆಲವು ಭಾಗಗಲು ಸಹ ಸೇರಿವೆ.

(ಅಲ್‌ಫಾರೂಖ್, ಪುಟ–159, ಇದಾರಃ ಇಸ್ಲಾಮಿಯಾತ್ 2004)

ಇಸ್ಲಾಮಿಕ ಯುದ್ಧಗಳು ಮತ್ತು ವಿಜಯಗಳ ಪರಂಪರೆ ಹಝ್ರತ್ ಅಬೂಬಕರರ(ರ) ಕಾಲದಲ್ಲಿ ಶುರುವಾಗಿತ್ತು. ಹಝ್ರತ್ ಅಬೂಬಕರರ ಕಾಲದಲ್ಲಿ ಸಿರಿಯ ಮತ್ತು ಇರಾಕಿನಲ್ಲಿ ಇಸ್ಲಾಮಿಕ ಸೈನ್ಯಗಳು ಯುದ್ಧದಲ್ಲಿ ನಿರತರಾಗಿದ್ದರು. ಒಂದೇ ಸಮಯದಲ್ಲಿ ಅನೇಕ ಸ್ಥಳಗಳಲ್ಲಿ ಯುದ್ಧಗಳು ನಡೆಯುತ್ತಿದ್ದುವು. ಹೀಗೆ ಈ ಪರಂಪರೆ ನಡೆಯುತ್ತಾ ಹೋಯಿತು. ಹಝ್ರತ್ ಉಮರರ ಖಿಲಾಫತ್ ಕಾಲದಲ್ಲೂ ಅದೇ ರೀತಿಯಲ್ಲಿ ಜಾರಿಯಲ್ಲಿತ್ತು. ಹಝ್ರತ್ ಉಮರರ(ರ) ಖಿಲಾಫತ್ ಕಾಲದಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದ್ದ ಒಂದು ಸಂಗತಿಯೇನೆಂದರೆ, ಹಝ್ರತ್ ಉಮರ್(ರ) ಅನೇಕ ಕೆಲಸಗಳಲ್ಲಿ ನಿರತರಾಗಿದ್ದರು ಕೂಡ ಬಹುತೇಕ ಯುದ್ದಗಳಲ್ಲಿ ಮುಸ್ಲಿಮರ ಸೈನ್ಯದಲ್ಲಿ ಇದ್ದರು. ಅವರು ತಮ್ಮ ಖಿಲಾಫತಿನ ಕಾಲದಲ್ಲಿ ಯಾವುದೇ ಯುದ್ಧದಲ್ಲಿ ಪೂರ್ಣವಾಗಿ ಭಾಗಿಯಾಗದಿದ್ದರೂ ಮುಸ್ಲಿಮರ ಕಮಾಂಡರಿಗೆ ಸೈನ್ಯದ ಕುರಿತು ಎಲ್ಲ ನಿರ್ದೇಶನಗಳನ್ನು ಮದೀನದಿಂದ ಕಳುಹಿಸುತ್ತಿದ್ದರು. ಅವರು ಎಲ್ಲಿದ್ದರೂ ಅಲ್ಲಿಂದ ಸೈನ್ಯದೊಂದಿಗೆ ಸಂಪರ್ಕದಲ್ಲಿ ಇರುತ್ತಿದ್ದರು. ಕೆಲವು ಯುದ್ಧಗಳ ಸ್ಥಿತಿಗತಿಗಳಿಂದ ಗೊತ್ತಾಗುವುದೇನೆಂದರೆ, ಮುಸ್ಲಿಂ ಸೇನಾಧಿಪತಿಗಳೊಂದಿಗೆ ದಿನಾಲೂ ಹಝ್ರತ್ ಉಮರ್(ರ) ಪತ್ರ ವ್ಯವಹಾರ ನಡೆಸುತ್ತಿದ್ದರು. ಹಝ್ರತ್ ಉಮರ್(ರ) ಮದೀನದಲ್ಲಿ ಇದ್ದುಕೊಂಡು ಮುಸ್ಲಿಮರಿಗೆ ಅವರ ಸೈನ್ಯಗಳನ್ನು ಕ್ರಮಪಡಿಸಲು ನಿರ್ದೇಶನಗಳನ್ನು ನೀಡಿದ್ದರು ಮತ್ತು ಹಝ್ರತ್ ಉಮರರ ಮುಂದೆ ಆ ಪ್ರದೇಶಗಳ ನಕ್ಷೆ ಇತ್ತು ಎಂಬಂತೆ ಅಥವಾ ಆ ಪ್ರದೇಶಗಳು ಅವರ ಮುಂದೆ ಇತ್ತು ಎಂಬ ರೀತಿಯಲ್ಲಿ ಅವರಿಗೆ ಆ ಪ್ರದೇಶಗಳ ಬಗ್ಗೆ ನಿರ್ದೇಶನಗಳನ್ನು ನೀಡುತ್ತಿದ್ದರು. ಇಮಾಂ ಬುಖಾರಿಯಲ್ಲಿ ಹಝ್ರತ್ ಉಮರರ(ರ) ಕುರಿತು ಹೀಗೆ ಬರೆಯಲಾಗಿದೆ **ವಖಾಲ ಉಮರು ರಝಿಯಲ್ಲಾಹು ಅನ್ಹು ಇನ್ನಿ ಲಉಜಹ್ಹಿಝು ಜೈಶಿ ವನಾ ಫಿಸ್ಸಲಾತಿ**. (ಸಹೀಹ್ ಬುಖಾರಿ, ಕಿತಾಬ್ ಅಲ್‌ಅಮಲ್ ಫಿಸ್ಸಲಾತ್)

ಅಂದರೆ ಹಝ್ರತ್ ಉಮರ್(ರ) ಹೇಳುತ್ತಿದ್ದರು: ನಾನು ನಮಾಝಿನಲ್ಲಿ ಇರುವಾಗಲೂ ನನ್ನ ಸೈನ್ಯವನ್ನು ತಯಾರು ಮಾಡುತ್ತಿರುತ್ತೇನೆ. ಎಂದರೆ ಅವರು ಎಷ್ಟು ಚಿಂತನೆಯಲ್ಲಿರುತ್ತಿದ್ದರು ಎಂದರೆ, ನಮಾಝಿನ ನಡುವೆ ಕೂಡ ಇಸ್ಲಾಮಿಕ ಸೈನ್ಯದ ಯೋಜನೆಯ ಕೆಲಸ ಜಾರಿಯಲ್ಲಿ ಇರುತ್ತಿತ್ತು. ಆ ವೇಳೆ ದುಆಗಳನ್ನು ಸಹ ಮಾಡುತ್ತಿರಬಹುದು. ಇದೇ ಕಾರಣದಿಂದ ಅವರ ನಿರ್ದೇಶನಗಳನ್ನು ಅನುಸರಿಸುತ್ತಾ ಮುಸ್ಲಿಮ್ ಸೈನ್ಯಗಳು ಅತ್ಯಂತ ಕಠಿಣ ಸ್ಥಿತಿಗಳಲ್ಲೂ ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ವಿಜಯಗಳನ್ನು ಗಳಿಸಿದ್ದನ್ನು ನಾವು ಎಲ್ಲೆಲ್ಲೂ ಕಾಣುತ್ತೇವೆ.

ಸಯ್ಯದ್ ಮೀರ್ ಮಹ್ಮೂದ್ ಅಹ್ಮದ್ ಸಾಹಿಬ್ ಕೂಡ ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲಘಟ್ಟದ ಬಗ್ಗೆ ಒಂದು ಪ್ರಬಂಧವನ್ನು ಬರೆದಿದ್ದಾರೆ ಮತ್ತು ನಮ್ಮ ಸೂಟ್ಸ್‌ಗಳನ್ನು ಸಿದ್ಧಪಡಿಸುವವರಿಗೂ ಇದರಿಂದ ಸಹಾಯ ಪಡೆದಿದ್ದಾರೆ. ಸಂಶೋಧನಾ ವಿಭಾಗದವರು ಇದರಿಂದ ಕೆಲವು ಟಿಪ್ಪಣಿಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಇದನ್ನು ಮೂಲ ಮೂಲದಿಂದ ಪರಿಶೀಲಿಸಲಾಗಿದೆ ಇದು ಸರಿಯಾಗಿದೆ. ಇರಾನ್ ಮತ್ತು ಇರಾಖ್ ವಿಜಯಗಳು ಹಝ್ರತ್ ಅಬೂಬಕರ್(ರ) ಸಮಯದಲ್ಲಿ ಪರ್ಷಿಯಾದ ಜನರೊಂದಿಗೆ ಯುದ್ಧ ನಡೆದಿತ್ತು, ಈ ಸಮಯದಲ್ಲಿ ಹಝ್ರತ್ ಅಬುಬಕರ್(ರ) ಅನಾರೋಗ್ಯಕ್ಕೆ ಒಳಗಾದರು, ಇದರಿಂದಾಗಿ ಇಸ್ಲಾಮಿಕ್ ಪಡೆಗಳು ಸಂದೇಶಗಳನ್ನು ಸ್ವೀಕರಿಸಲು ವಿಳಂಬವಾಯಿತು. ಆದ್ದರಿಂದ, ಹಝ್ರತ್ ಮುಸನ್ನ ಇಸ್ಲಾಮಿಕ್ ಸೈನ್ಯದಲ್ಲಿ ತನ್ನ ಉಪನಾಯಕನನ್ನು ನೇಮಿಸಿದರು ಮತ್ತು ಯುದ್ಧದ ಪರಿಸ್ಥಿತಿಯನ್ನು ತಿಳಿಸಲು ಮತ್ತು ಹೆಚ್ಚಿನ ಸಹಾಯವನ್ನು ಕೇಳಲು ಸ್ವತಃ ಹಝ್ರತ್ ಅಬುಬಕರ್(ರ) ಅವರ ಸೇವೆಗೆ ಬಂದರು. ಹಝ್ರತ್ ಮುಸನ್ನ ಮದೀನಾ ತಲುಪಿದರು ಮತ್ತು ಹಝ್ರತ್ ಅಬೂಬಕರ್(ರ) ಅವರಿಗೆ ಘಟನೆಗಳ ಬಗ್ಗೆ ತಿಳಿಸಿದರು. ಇದಾದ ಮೇಲೆ, ಹಝ್ರತ್ ಅಬುಬಕರ್, ಹಝ್ರತ್ ಉಮರ್(ರ) ರವರಿಗೆ ಕರೆಸಿ ಹೀಗೆ ವಸಿಯ್ಯತ್ ಮಾಡಿದರು: ಓ ಉಮರ್! ನಾನು ಹೇಳುವುದನ್ನು ಎಚ್ಚರಿಕೆಯಿಂದ ಆಲಿಸಿ ಮತ್ತು ಅದರಂತೆ ನಡೆದುಕೊಳ್ಳಿ. ಇಂದು ಸೋಮವಾರ, ನಾನು ಇಂದು ಮರಣ ಹೊಂದುವ ನಿರೀಕ್ಷೆಯಿದೆ

ಎಂದು ಹಝ್ರತ್ ಅಬುಬಕರ್(ರ) ಹೇಳುತ್ತಾರೆ. ನಾನು ನಿಧನ ಹೊಂದಿದರೆ, ಜಿಹಾದ್ ಅನ್ನು ಪ್ರೋತ್ಸಾಹಿಸಲು ಸಂಜೆಯ ಮೊದಲು ಮುಸನ್ನ ಅವರೊಂದಿಗೆ ಜನರನ್ನು ಕಳುಹಿಸಿ ಕೊಡಿ, ಮತ್ತು ನನ್ನ ಸಾವು ರಾತ್ರಿಯವರೆಗೆ ವಿಳಂಬವಾದರೆ, ಮುಂಜಾನೆಯ ಮೊದಲು ಜನರನ್ನು ಇಗ್ಗೂಡಿಸಿ ಮುಸನ್ನನವರೊಂದಿಗೆ ಕಳುಹಿಸಿರಿ. ನನ್ನ ನಿಧನವೂ ಎಷ್ಟೇ ದೊಡ್ಡ ದುರಂತವಾಗಿದ್ದರೂ, ಧರ್ಮದ ನಿಯಮಗಳನ್ನು ಮತ್ತು ಸರ್ವಶಕ್ತನಾದ ಅಲ್ಲಾಹನ ನಿಯಮಗಳನ್ನು ಅನುಸರಿಸಲು ಅಡ್ಡಿ ಆಗಬಾರದು. ಪ್ರವಾದಿ(ಸ)ರ ನಿಧನದ ಸಂದರ್ಭದಲ್ಲಿ ಜನರು ಹಾಗೂ ಜೀವಿಗಳು ಎಂದಿಗೂ ಇಂತಹ ಅನಾಹುತವನ್ನು ಅನುಭವಿಸದಿದ್ದರೂ ನಾನು ಏನು ಮಾಡಿದೆ ಎಂಬುದನ್ನು ನೀವು ನೋಡಿದ್ದೀರಿ. ಅಲ್ಲಾಹನಆಣೆ! ಆ ಸಮಯದಲ್ಲಿ ಪ್ರವಾದಿ(ಸ) ಅವರ ಆದೇಶವನ್ನು ಕೈಗೊಳ್ಳುವಲ್ಲಿ ನಾನು ಸ್ವಲ್ಪ ವಿಳಂಬವನ್ನು ಅನುಮತಿಸಿದ್ದರೆ, ಅಲ್ಲಾಹನು ನಮ್ಮನ್ನು ಅವಮಾನಿಸುತ್ತಿದ್ದನು. ಆತನು ನಮ್ಮನ್ನು ಶಿಕ್ಷಿಸುತ್ತಾನೆ ಮತ್ತು ಬೆಂಕಿಯ ಜ್ವಾಲೆ ಮದೀನಾದಲ್ಲಿ ಉರಿಯುತ್ತಿತ್ತು. ಆದ್ದರಿಂದ, ಹಝ್ರತ್ ಅಬೂಬಕ್ಕರ್(ರ) ನಿಧನದ ನಂತರ, ಹಝ್ರತ್ ಉಮರ್(ರ) ಅವರು ಖಿಲಾಫತ್ತಿನ ಸಿಂಹಾಸನವನ್ನು ಏರಿದ ತಕ್ಷಣ, ಈ ವಸಿಯ್ಯತ್ತನ್ನು ಪೂರೈಸಲು ಹಝ್ರತ್ ಅಬುಬಕರ್(ರ)ರವರ ತದ್‌ಫೀನ್ ಮಾಡಿದ ಮರುದಿನ ಜನರನ್ನು ಒಟ್ಟುಗೂಡಿಸಿದರು. ಖಲೀಫದ ನಿಷ್ಠೆಯನ್ನು ಪ್ರತಿಜ್ಞೆ ಮಾಡಲು ಎಲ್ಲಾ ಕಡೆಯಿಂದ ಹಲವಾರು ಜನರು ಬಂದಿದ್ದರು. ಹಝ್ರತ್ ಉಮರ್(ರ) ಈ ಅವಕಾಶವನ್ನು ಬಳಸಿಕೊಂಡರು ಮತ್ತು ಸಾರ್ವಜನಿಕವಾಗಿ ಜಿಹಾದ್‌ನ ಬಗ್ಗೆ ಬೋಧಿಸಿದರು ಏಕೆಂದರೆ ಪ್ರಾಚೀನ ಅರಬ್ ಸಾಮ್ರಾಜ್ಯಗಳು ಇರಾನ್‌ನ ವೈಭವ ಮತ್ತು ಪ್ರಬಲ ಮಿಲಿಟರಿ ಸಾಮರ್ಥ್ಯಕ್ಕೆ ಹೆದರುತ್ತಿದ್ದವು, ಮತ್ತು ಜನರು ಸಾಮಾನ್ಯವಾಗಿ ಇರಾಖ್ ಪರ್ಷಿಯನ್ ಸರ್ಕಾರದ ಸಾಮ್ರಾಜ್ಯವಾಗಿದೆ ಎಂದು ನಂಬಿದ್ದರು. ಮತ್ತು ಅವರು ಹಝ್ರತ್ ಖಾಲಿದ್(ರ) ಇಲ್ಲದೆ ಗೆಲ್ಲಲು ಸಾಧ್ಯವಿಲ್ಲ ಹಾಗಾಗಿ ಎಲ್ಲರೂ ಮೌನವಾಗಿದ್ದರು. ಹಝ್ರತ್ ಉಮರ್(ರ) ಹಲವು ದಿನಗಳ ಕಾಲ ಬೋಧಿಸಿದರೂ ಪ್ರಯೋಜನವಾಗಲಿಲ್ಲ. ಅಂತಿಮವಾಗಿ, ನಾಲ್ಕನೇ ದಿನ, ಅವರು ತುಂಬಾ ಉತ್ಸಾಹದಿಂದ ಭಾಷಣ ಮಾಡಿದರು, ಪ್ರೇಕ್ಷಕರ ಹೃದಯಗಳು ಕದಲಿದವು ಮತ್ತು ಜನರ ನಂಬಿಕೆಯು ಉತ್ಸಾಹಭರಿತವಾಯಿತು. ಮತ್ತು ಈ ಜಿಹಾದ್‌ಗಾಗಿ ಅವರ ಹೆಸರನ್ನು ನೀಡಿದರು. ತದನಂತರ ಹಝ್ರತ್ ಸಅದ್ ಬಿನ್ ಉಬೈದ್ ಬಿನ್ ಸಖಿಫಿ(ರ) ಮುಂದಾದರು **ಅನಾಲಿಹಾರುಖು** ಎಂದು ಘೋಷಣೆಯನ್ನು ಕೂಗಿದರು. ಈ ಜಿಃಆದಿಗಾಗಿ ತಮ್ಮ ಹೆಸರನ್ನು ನೊಂದಾಯಿಸಿದರು. ತದನಂತರ ಸಅದ್ ಬಿನ್ ಉಬೈದ(ರ) ಮತ್ತು ಸಲಿತ್ ಬಿನ್ ಕೈಸ್ ಬಂದರು. ಇವರೆಲ್ಲರು ಮುಂದಕ್ಕೆ ಬಂದಾಗ ಈ ಜನರಿಗೆ ಕಂಡು ಮುಸ್ಲಿಮರ ಹೃದಯದಲ್ಲಿ ನಂಬಿಕೆಯ ಹುಮ್ಮಸ್ಸು ಏರಿತು ಮತ್ತು ಅವರು ಹೆಚ್ಚಿನ ಉತ್ಸಾಹವನ್ನು ಮೀರಿ ಇರಾಕಿ ಜಿಹಾದ್‌ಗಾಗಿ ತಮ್ಮ ಹೆಸರನ್ನು ನೀಡಲು ಆರಂಭಿಸಿದರು. ಮೊದಲು, ಇರಾಕಿ ಪಡೆಗಳ ಆಜ್ಞೆಯು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಕೈಯಲ್ಲಿತ್ತು, ಆದರೆ ಹಝ್ರತ್ ಅಬುಬಕರ್(ರ) ತನ್ನ ಕೊನೆಯ ದಿನಗಳಲ್ಲಿ, ಸಿರಿಯನ್ ಯುದ್ಧಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸಿರಿಯಾಕ್ಕೆ ಹೋಗಲು ಆದೇಶಿಸಿದರು ಮತ್ತು ಈಗ ಇಸ್ಲಾಮಿಕ್ ಕಮಾಂಡರ್ ಇರಾಕ್‌ನ ಸೇನೆ, ಹಝ್ರತ್ ಮುಸನ್ನ ಬಿನ್ ಹರಿಸಾ(ರ). ಹಝ್ರತ್ ಉಮರ್(ರ) ಮುಸ್ಲಿಮರನ್ನು ಇರಾಕ್‌ನಲ್ಲಿನ ಯುದ್ಧಗಳಿಗೆ ತನ್ನ ಹೆಸರನ್ನು ಪ್ರಸ್ತುತಪಡಿಸಲು ಆಹ್ವಾನಿಸುತ್ತಿದ್ದ ಸಂದರ್ಭದಲ್ಲಿ, ಹಝ್ರತ್ ಮುಸನ್ನ ಮದೀನಾಗೆ ಭೇಟಿ ನೀಡಿದ್ದರು. ಆಗ ಅವರು ಸಹ ಒಂದು ರೋಮಾಂಚಕಾರಿ ಭಾಷಣವನ್ನು ನೀಡುತ್ತಾ ಹೇಳಿದರು ಓ ಜನರೇ!! ಈ ಮುಂಭಾಗವನ್ನು ತುಂಬಾ ಕಠಿಣವಾಗಿರಬಹುದು ಎಂದು ತೆಗೆದುಕೊಳ್ಳಬೇಡಿ. ನಾವು ಪರ್ಷಿಯನ್ನರ ವಿರುದ್ಧ ಹೋರಾಡಿದೆವು ಮತ್ತು ಅವರನ್ನು ಜಯಿಸಿದೆವು ಮತ್ತು ಇನ್ಶಾಅಲ್ಲಾಹ್ ಅದರ ನಂತರವೂ ನಮಗೆ ಜಯ ಸಿಗುತ್ತದೆ. ಈ ಎಲ್ಲಾ ಭಾಷಣಗಳನ್ನು ಕೇಳಿದ ನಂತರ, ಮುಜಾಹಿದ್ದೀನ್ ಸೇನೆಯು ಈಗ ಮದೀನಾ ಮತ್ತು ಅದರ ಸುತ್ತಮುತ್ತಲಿನಿಂದ ಇರಾಕಿನ ಯುದ್ಧಗಳನ್ನು ಸೇರಲು ಸಿದ್ಧವಾಗಿತ್ತು. ತಬರಿ ಮತ್ತು ಬಾಲಜಾರಿ ಈ ಸೈನ್ಯದ ಸಂಖ್ಯೆಯನ್ನು ಒಂದು ಸಾವಿರ ಮತ್ತು ಅಲ್ಲಮ ಅಬು ಹನೀಫ ದೀನ್ವಾರಿ, ಅಖ್ಬಾರ್ ಅಲ್-ತವಾಲ್ ಪುಸ್ತಕದ ಲೇಖಕ ಐದು ಸಾವಿರ ಎಂದು ಹೇಳಿದ್ದಾರೆ. ಮದೀನಾದಿಂದ ನಿರ್ಗಮಿಸುವ ಸಮಯದಲ್ಲಿ ಸೈನ್ಯದ ಸಂಖ್ಯೆಯು ಒಂದು ಸಾವಿರ ಎಂದು ತೋರುತ್ತದೆ, ಆದರೆ ಅದು ಯುದ್ಧದ ಮುಂಭಾಗವನ್ನು ತಲುಪುವ ವೇಳೆಗೆ, ಸಂಖ್ಯೆಯು ಐದು ಸಾವಿರಕ್ಕೆ ಏರಿತು, ಏಕೆಂದರೆ ಬಾಲಜಾರಿ ಮತ್ತು ಅಬು ಹನೀಫಾ ಆಹ್ವಾನಿಸಿದ್ದಾರೆ ಈಗ ಈ ಸೈನ್ಯದ ಅಮೀರ್(ನಾಯಕ) ಯಾರು ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ? ಹಝ್ರತ್ ಮುಸನ್ನನಾಗಿದ್ದರೂ, ಹೊಸ ಸೈನ್ಯದ ನಾಯಕ ಯಾರು? ಹಝ್ರತ್ ಉಮರ್(ರ) ಅವರ ಸಾರ-ಪ್ರಜ್ಞೆಯ ನೋಟವು ಅಬು ಉಬೈದ್ ಸಖಾಫಿ(ರ)ರವರನ್ನು ಆಯ್ಕೆ ಮಾಡಿತು. ಇದನ್ನು ಕಂಡು ಕರಲವು ಜನರನ್ನು ಈ ಆಯ್ಕೆಯು ಇಷ್ಟವಾಗಲಿಲ್ಲ ಅಂದರೆ ಸಾಬಿಖೂನಲ್ ಅವ್ವಲೂನ್, ಮುಹಾಜಿರೀನ್ ಮತ್ತು ಅನ್ಸಾರ್‌ಗಳನ್ನು ಹೊರತುಪಡಿಸಿ ಇಸ್ಲಾಂನ ಸಸ್ಯವನ್ನು ತಮ್ಮ ರಕ್ತದಿಂದ ನೆನೆಸಿದವರನ್ನು ಹೊರತುಪಡಿಸಿ, ನಂತರ ಬಂದ ವ್ಯಕ್ತಿಯನ್ನು ನಾಯಕನನ್ನಾಗಿ ಮಾಡಿದ್ದಾರೆ ಎಂದು. ಹಝ್ರತ್ ಉಮರ್(ರ) ಹೇಳೀದರು: ಸಹಾಬರವರನ್ನು ಯಾವುದೇ ಒಂದು ಗೌರವದ ಸ್ಥಾನಗಳಿಸಿದ್ದಾರೆ ಎಂದರೆ ಅದು ಅವರು ಇಸ್ಲಾಂ ಧರ್ಮಕ್ಕೆ ನೀಡಿದ ಸೇವೆಯಲ್ಲಿ ಮುಂಚೂಣಿಯಲ್ಲಿದ್ದರು ಮತ್ತು ಧರ್ಮದ ವತಿಯಿಂದ ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲು ಬದ್ಧ ವೈರಿಯ ವಿರುದ್ಧ ಹೋರಾಡಿದ್ದರು. ಆದರೆ ಈಗ ಅವರು ಈ ಸಂದರ್ಭದಲ್ಲಿ ಹಿಂದಕ್ಕೆ ಸರಿದಿದ್ದಾರೆ ಹೀಗಾಗಿ ಅವರಿ ತಮ್ಮ ಹಕ್ಕನ್ನು ವಜಗೊಳಿಸಿಕೊಂಡಿದ್ದಾರೆ ಆದ್ದರಿಂದ, ಈ ಸಂದರ್ಭದಲ್ಲಿ ಇಸ್ಲಾಂ ಧರ್ಮವನ್ನು ರಕ್ಷಿಸಲು ಮೊದಲು ಬಂದ ವ್ಯಕ್ತಿಯು ನಾಯಕತ್ವಕ್ಕೆ ಅರ್ಹನಾಗಿದ್ದಾನೆ. ಹಝ್ರತ್ ಅಬು ಉಬೈದ್(ರ) ನಂತರ, ಸಅದ್ ಬಿನ್ ಉಬೈದ್(ರ) ಮತ್ತು ಸಲಿತ್ ಬಿನ್ ಕೈಸ್(ರ) ಇರಾಕ್ ನಲ್ಲಿ ಯುದ್ಧಕ್ಕೆ ಕರೆ ನೀಡಿದ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಅವರ ಕರೆಗೆ ಪ್ರತಿಕ್ರಿಯಿಸಿದರು. ಅವರಿಬ್ಬರನ್ನೂ ಉದ್ದೇಶಿಸಿ, ಹಝ್ರತ್ ಉಮರ್(ರ) ಹೇಳಿದರು: "ನನ್ನ ಕರೆಗೆ ಸ್ಪಂದಿಸುವಲ್ಲಿ ನೀವು ಮುಂದಾಳತ್ವ ವಹಿಸಿದ್ದರೆ, ಇಸ್ಲಾಂ ಸ್ವೀಕರಿಸಲು ನನ್ನ ಮುಂದಾಳತ್ವದಿಂದಾಗಿ ನಾನು ನಿಮಗೆ ಈ ನಾಯಕತ್ವವನ್ನು ನೀಡುತ್ತಿದ್ದೆ" ಎಂದು ಹೇಳಿದರು. ಸಲೀತ್ ಇಬ್ನ್ ಕೇಸ್(ರ)ಗಿಂತ ಅಬು ಉಬೈದ್‌ಗೆ ಆದ್ಯತೆ ನೀಡುವುದರ ಹೊರತಾಗಿ, ಮೊದಲ ಕಾರಣವೆಂದರೆ ಹಝ್ರತ್ ಉಮರ್(ರ) ಈ ಕೆಲಸಕ್ಕಾಗಿ, ತಾಳ್ಮೆ ಮತ್ತು ದೂರದೃಷ್ಟಿಯಿಂದ ಯುದ್ಧವನ್ನು ಪ್ರಾರಂಭಿಸುವ ವ್ಯಕ್ತಿಯ ಅಗತ್ಯವಿದೆ ಎಂದು ಹೇಳಿದ್ದರು. ಹಝ್ರತ್ ಉಮರ್(ರ) ಗೌರವಾರ್ಥವಾಗಿ ಅಬು ಉಬೈದ್(ರ) ಅವರಿಗೆ ಈ ಮಹತ್ವದ ನಾಯಕತ್ವವನ್ನು ನೀಡಿದ್ದರೂ, ಹಝ್ರತ್ ಪ್ರವಾದಿ(ಸ)ರ ಹಿರಿಯ ಸಹಾಬರವರ ಪ್ರಾಚೀನ ಸೇವೆಗಳು ಮತ್ತು ಹಿಂದಿನ ಅನುಭವಗಳನ್ನು ನಿರ್ಲಕ್ಷಿಸುವುದು ಸೂಕ್ತವಲ್ಲ, ಆದ್ದರಿಂದ ಅವರು ಸಹಾಬರವರ ಸಲಹೆಯಿಂದ ಪ್ರಯೋಜನ ಪಡೆಯುವಂತೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ಪಡೆದುಕೊಳ್ಳುವಂತೆ ಹಝ್ರತ್ ಅಬು ಉಬೈದ್ ಸಖಾಫಿ(ರ)ರವರನ್ನು ತಿಳಿ ಮಾತು ಹೇಳಿದರು. ಇದು ವಿಭಿನ್ನ ಇತಿಹಾಸ ಗ್ರಂಥಗಳ ಉಲ್ಲೇಖಗಳಾಗಿವೆ. ತಾರೀಖ್ ಅತ್ತಿಬರಿನಲ್ಲಿ ಈ ಸಂಪೂರ್ಣ ಘಟನೆಯನ್ನು ಉಲ್ಲೇಖಿಸಲಾಗಿದೆ. ಇದು ತಬರಿಯ ಇತಿಹಾಸದ ಸಂಪೂರ್ಣ ಘಟನೆಯಾಗಿದ್ದು, ಇದರಿಂದ ಇದನ್ನು ಪಡೆಯಲಾಗಿದೆ.

(ತಾರೀಖ್ ಇಸ್ಲಾಮ್ ಬಿಅಹದ್ ಹಝ್ರತ್ ಉಮರ್(ರ), ಪ್ರಬಂಧ ಮೀರ್ ಮುಹ್ಮೂದ್ ಅಹ್ಮದ್ ನಾಸಿರ್‌ಸಾಹಿಬ್, ಪುಟ-7-9) (ತಾರೀಖ್ ಅತ್ತಿಬರಿ, ಸಂಪುಟ-2, ಪುಟ-194, ನಫೀಸ್ ಅಕಾಡಮಿ ಕರಾಚಿ 2004) (ಅಖ್ಬಾರ್ ಅತ್ತೂಲ್, ಅಬೂ ಹನೀಫ ದೀನೂರಿ, ಪುಟ-165-166, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಫತೂಹ್ ಅಲ್‌ಬಲದಾನ್ ಅಲ್ಲಾಮ ಬಲಾಝುರಿ, ಪುಟ-350, ಮುಅಸ್ಸಸುಲ್ ಮುಆರಿಫ್ ಬೈರೂತ್ 1987) (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಪುಟ-353,354, ದಾರುಲ್ ಮಾರಿಫ ಬೈರೂತ್ 2007) (ಅಲ್‌ಫಾರೂಖ್, ಶಿಬ್ಲಿ ನುಮಾನ, ಪುಟ-78-79, ಇದಾರಃ ಇಸ್ಲಾಮಿಯಾತ್ 2004)

ಹಿಜರೀ 13ರಲ್ಲಿ ನುಮಾರಿಕ್ ಮತ್ತು ಕಸ್ಕರ್ ಎಂದು ಕರೆಯಲ್ಪಡುವ ಒಂದು ಯುದ್ಧ ನಡೆಯಿತು. ಅದರ ವಿವರಣೆ ಹೀಗಿದೆ: ಇರಾನಿನ ಆಸ್ಥಾನ ಮುಖಂಡರ ಪರಸ್ಪರ ಭಿನ್ನಾಭಿಪ್ರಾಯಗಳ ಕಾರಣ ಕಷ್ಟತೆಗಳಿಗೆ ಗುರಿಯಾಗಿತ್ತು. ಇಂತದ್ದರಲ್ಲಿ ರುಸ್ತಮಿನ ರೂಪದಲ್ಲಿ ಒಬ್ಬ ಹೊಸ ವ್ಯಕ್ತಿಯು ಬೆಳಕಿಗೆ ಬರುತ್ತಾನೆ. ಅವನನ್ನು ಬೇಗನೇ ಕಪ್ಪು ಮತ್ತು ಬಿಳಿ ಜನರ ಸರದಾರರನ್ನಾಗಿ ಇರಾನಿನ ಆಸ್ಥಾನವು ಮಾಡಿತು. ರುಸ್ತಮ್ ಒಬ್ಬ ಧೈರ್ಯಶಾಲಿ ಮತ್ತು ತಂತ್ರಶಾಲಿ ವ್ಯಕ್ತಿಯಾಗಿದ್ದನು. ಮುಸ್ಲಿಮರು ವಿಜಯ ಸಾಧಿಸಿದ ಪ್ರದೇಶಗಳಲ್ಲಿ ಅವನು ತನ್ನ ಜನರ ಮೂಲಕ ಬಂಡಾಯ ಎಬ್ಬಿಸಿದನು ಮತ್ತು ಹಝ್ರ‌ತ್ ಮುಸ್ನಾರನ್ನು ಎದುರಿಸಲಿಕ್ಕಾಗಿ ಒಂದು ಸೈನ್ಯವನ್ನು ರವಾನೆ ಮಾಡಿದನು. ಈ ಸ್ಥಿತಿಯಲ್ಲಿ ಹಿಂದಕ್ಕೆ ಸರಿಯುವುದೇ ಸರಿ ಎಂದು ಹಝ್ರ‌ತ್ ಮುಸ್ನಾ ಭಾವಿಸಿದರು. ಮತ್ತೊಂದು ಕಡೆ ರುಸ್ತಂ ತನ್ನ ಸಿದ್ಧತೆಯನ್ನು ಜಾರಿಯಲ್ಲಿರಿಸಿದನು ಮತ್ತು ಒಂದು ಶಕ್ತಿಶಾಲಿ ಸೈನ್ಯವನ್ನು ತಯಾರುಮಾಡಿ ಎರಡು ಬೇರೆ ಬೇರೆ ಮಾರ್ಗಗಳಿಂದ

ಮುಸ್ಲಿಮರ ವಿರುದ್ಧ ಹೋರಾಡಲು ರವಾನೆ ಮಾಡಿದನು. ಒಂದು ಸೈನ್ಯವು ಜಾಬಾನಿನ ನೇತೃತ್ವದಲ್ಲಿ ಕೂಫದ ಸಮೀಪದ ನುಮಾರಿಖ ಎಂಬ ಸ್ಥಳಕ್ಕೆ ತಲುಪಿತು. ಮತ್ತೊಂದು ಸೈನ್ಯವು ನರ್ಸಿಯ ನಾಯಕತ್ವದಲ್ಲಿ ಕಸ್ಕರಿಗೆ ತಲುಪಿತು. ಬಗ್ದಾದ್ ಮತ್ತು ಬಸ್ರದ ನಡುವೆ ದಜ್‌ಲ ನದಿಯ ಪಶ್ಚಿಮ ದಡದಲ್ಲಿ ಕಸ್ಕರಿನ ಪಟ್ಟಣವು ನೆಲೆಸಿತ್ತು. ನುಮಾರಿಖಿನಲ್ಲಿ ಹಝ್ರತ್ ಅಬೂಉಬೈದ ಮತ್ತು ಜಾಬಾನಿನ ಸೈನ್ಯಗಳು ಮುಖಾಮುಖಿಯಾದುವು. ಒಂದು ಪ್ರಚಂಡ ಯುದ್ಧ ನಡೆಯಿತು. ಅದರಲ್ಲಿ ಇರಾನನ ಸೈನ್ಯ ಸೋತು ಹೋಯಿತು. ಇಲ್ಲಿ ಇಸ್ಲಾಮಿಕ ನೈತಿಕ ಗುಣದ ಒಂದು ಅತ್ಯುನ್ನತ ಮಾದರಿ ಕಾಣಲು ಸಿಕ್ಕಿತ್ತು. ಇರಾನಿನ ಸೈನ್ಯದಲ್ಲಿ ಬಾದಶಾಹನಂತಹ ಸ್ಥಾನವನ್ನು ಪಡೆದಿದ್ದ ಜಾಬಾನ್ ಬಂಧಿಯಾದನು. ಅವನನ್ನು ಬಂಧಿಸಿದ ಸಿಪಾಯಿಗಳಿಗೆ ಅವನ ಪರಿಚಯವಿರಲಿಲ್ಲ. ಅದರಿಂದ ಪ್ರಯೋಜನ ಪಡೆಯುತ್ತಾ ಅವನು ಮೌನವಾಗಿ ಪರಿಹಾರ ಧನವನ್ನು ಪಾವತಿಸಿ ಬಿಡುಗಡೆ ಪಡೆದನು. ಇತರ ಮುಸ್ಲಿಮರಿಗೆ ಈ ಸುದ್ದಿ ತಲುಪಿದಾಗ ಅವರು ಜಾಬಾನನ್ನು ಪುನಃ ಬಂಧಿಸಿದರು. ಆದರೆ ಯಾವ ವ್ಯಕ್ತಿಯನ್ನು ಮುಸ್ಲಿಮರ ಸಿಪಾಯಿಗಳು ಒಂದು ಬಾರಿ ಫಿದ್‌ಯ ಪಡೆದು ಬಿಡುಗಡೆಗೊಳಿಸಿದನೋ ಅವನನ್ನು ಪುನಃ ಬಂಧಿಸುವುದನ್ನು ಹಝ್ರತ್ ಅಬೂ ಉಬೈದ ಸಹಿಸಲಿಲ್ಲ. ಹೀಗೆ ಮುಸ್ಲಿಮರು ಪ್ರಚಂಡ ಯುದ್ಧದಿಂದ ಪ್ರಯೋಜನಗಳನ್ನು ಪಡೆಯುವಾಗಲೂ ಶ್ರೇಷ್ಠ ಮಟ್ಟದ ಸ್ವಭಾವಗುಣಗಳನ್ನು ಕೈಬಿಡಲಿಲ್ಲ. (ತಾರೀಖ್ ಇಸ್ಲಾಮ್ ಬಿಅಹದ್ ಹಝ್ರತ್ ಉಮರ್(ರ), ಪ್ರಬಂಧ ಮೀರ್ ಮುಹ್ಮೂದ್ ಅಹ್ಮದ್ ನಾಸಿರ್‌ಸಾಹಿಬ್, ಪುಟ–9–12) (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–362–363, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–5, ಪುಟ–351, ಸಂಪುಟ–2, ಪುಟ–434, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಿಜರೀ 13ರಲ್ಲಿ ಸಖಾತಿಯ ಯುದ್ಧ ನಡೆಯಿತು. ನುಮಾರಿಖಿನಲ್ಲಿ ಸೋಲನುಭವಿಸಿ ಇರಾನಿನ ಸೈನ್ಯ ಕಸ್ಕರಿನ ಕಡೆಗೆ ಓಡಿಹೋಯಿತು. ಅಲ್ಲಿ ಇರಾನಿನ ಕಮಾಂಡರ್ ಆದ ನರ್ಸಿ ಮೊದಲೇ ಒಂದು ಸೈನ್ಯದೊಂದಿಗೆ ಮುಸ್ಲಿಮರನ್ನು ಎದುರಿಸಲು ತಯಾರಾಗಿದ್ದನು. ಅಲ್ಲಿ ಸಖಾತಿಯದ ಮೈದಾನದಲ್ಲಿ ಒಂದು ಪ್ರಚಂಡ ಯುದ್ಧದ ನಂತರ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರಿಗೆ ವಿಜಯ ಲಭಿಸಿತು. ಈ ದೊಡ್ಡ ಯುದ್ಧದ ನಂತರ ಹಝ್ರತ ಅಬೂ ಉಬೈದ(ರ)ರವರು ಕಸ್ಕರ್‌ನ ಸುತ್ತಮುತ್ತಲಿನ ಪ್ರದೇಶಗಳಲ್ಲಿದ್ದ ವೈರಿಯರನ್ನು ಎದುರಿಸಲು ಇಸ್ಲಾಮಿಕ್ ಸೈನ್ಯಗಳನ್ನು ಕಳುಹಿಸಲು ಪ್ರಾರಂಭಿಸಿದರು. (ತಾರೀಖ್ ಇಸ್ಲಾಮ್ ಬಿಅಹದ್ ಹಝ್ರತ್ ಉಮರ್(ರ), ಪ್ರಬಂಧ ಮೀರ್ ಮುಹ್ಮೂದ್ ಅಹ್ಮದ್ ನಾಸಿರ್‌ಸಾಹಿಬ್, ಪುಟ–12–13) (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–364, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2012)

ಬಾರೂ ಸಮಾಯ ಯುದ್ಧ ಸಹ ಹಿಜರೀ 13ರಲ್ಲಿ ನಡೆಯಿತು. ಈ ಪ್ರದೇಶ ಕಸ್ಕರ್ ಮತ್ತು ಸಖಾತಿಯದ ನಡುವೆ ಇತ್ತು. ಅಲ್ಲಿ ಇರಾನಿನ ಸೇನಾಧಿಪತಿ ಜಾಲಿನೂಸ್‌ನೊಡನೆ ಮುಖಾಮುಖಿಯಾಯಿತು. ಬಸ್ರ ಮತ್ತು ಕೂಫದ ನಡುವೆ ಇರುವ ಗ್ರಾಮಗಳನ್ನು **ಅರ್‌ಝೀ ಸುವಾದ್** ಎಂದು ಹೇಳಲಾಗುತ್ತದೆ. ಬಾರೂಸಮಾ ಮತ್ತು ಬಾಖುಸಿಯಾಸ ಆ ಗ್ರಾಮಗಳಲ್ಲಿ ಇರುವ ಎರಡು ಗ್ರಾಮಗಳಾಗಿವೆ. ಅಬೂ ಉಬೈದ ಬಾಖುಸಿಯಾಸಾ ತಲುಪಿದರು ಮತ್ತು ಸಣ್ಣದಾದೊಂದು ಯುದ್ಧದ ನಂತರ ಇರಾನಿ ಸೈನ್ಯ ಪರಾಜಯಗೊಂಡಿತು. (ತಾರೀಖ್ ಇಸ್ಲಾವ್ ಬಿಅಹದ್ ಹಝ್ರತ್ ಉಮರ್(ರ), ಪ್ರಬಂಧ ಮೀರ್ ಮುಹ್ಮೂದ್ ಅಹ್ಮದ್ ನಾಸಿರ್‌ಸಾಹಿಬ್, ಪುಟ–14) (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಪುಟ–357, ದಾರುಲ್ ಮಾರಿಫ ಬೈರೂಥ್ 2007) (ಮುಜಮುಲ್ ಬಲದಾನ್. ಸಂಪುಟ–1, ಪುಟ–261, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್)

ಹಿಜರೀ 13ರಲ್ಲಿ ಫರಾತ್ ನದಿಯ ದಡದಲ್ಲಿ ಮುಸ್ಲಿಮರು ಮತ್ತು ಇರಾನಯರ ನಡುವೆ ಜಿಸರ್ ಯುದ್ಧ ನಡೆಯಿತು. ಅಬೂ ಉಬೈದ ಸಖ್‌ಫಿ ಮುಸ್ಲಿಮರ ಸೇನಾಧಿಪತಿಯಾಗಿದ್ದರು. ಬಹ್ಮನ್ ಜಾಝ್‌ವಿಯ ಇರಾನಿನ ಸೇನಾಧಿಪತಿಯಾಗಿದ್ದರು. ಮುಸ್ಲಿಮರ ಸೈನ್ಯಬಲ ಹತ್ತು ಸಾವಿರ ಸೈನಿಕರದ್ದಾಗಿತ್ತು. ಇರಾನಿನ ಸೈನ್ಯ ಮೂವತ್ತು ಸಾವಿರ ಸಿಪಾಯಿಗಳನ್ನು ಒಳಗೊಂಡಿತ್ತು. ಮಾತ್ರವಲ್ಲ ಇರಾನನ ಸೈನ್ಯದಲ್ಲಿ 300 ಆನೆಗಳು ಸಹ ಇದ್ದುವು. ಫರಾತ್ ನದಿಯು ಮಧ್ಯದಲ್ಲಿ ಇರುವ ಕಾರಣದಿಂದ ಉಭಯ ಸೈನ್ಯಗಳು ಯುದ್ಧ ಮಾಡದೇ ನಿಂತಿದ್ದುವು. ಅನಂತರ ಉಭಯ ಪಕ್ಷಗಳ ಸಮ್ಮತಿಯಿಂದ ಫರಾತ್ ನದಿಯ ಮೇಲೆ ಒಂದು ಸೇತುವೆಯನ್ನು ತಯಾರು ಮಾಡಲಾಯಿತು. ಜಿಸರ್ ಎಂದರೆ ಸೇತುವೆ ಎಂದಾಗಿದೆ. ಆದರಿಂದಲೇ ಈ ಯುದ್ಧವನ್ನು ಜಿಸರ್ ಯುದ್ಧವೆಂದು ಕರೆಯಲಾಗಿದೆ. ಸೇತುವೆ ತಯಾರಾದ ನಂತರ ಹಝ್ರತ್ ಅಬೂಉಬೈದ ನದಿಯನ್ನು ಪಾರು ಮಾಡಿ ಪೇರ್ಶಿಯದ ಸೈನ್ಯದ ಮೇಲೆ ಹಲ್ಲೆ ನಡೆಸಿದರು. ಈ ಆಕ್ರಮಣದ ಪರಿಣಾಮವಾಗಿ ಆರಂಭದಲ್ಲಿ ಇರಾನಿನ ಸೈನ್ಯ ಚದುರಿ ಹೋಗುತ್ತಿತ್ತು. ಆದಾಗ್ಯೂ ಬಹ್ಮನ್ ಜಾಝ್‌ವಿಯ ತನ್ನ ಆನೆಗಳನ್ನು ಮುಂದಕ್ಕೆ ತಂದಾಗ ಮುಸ್ಲಿಮರ ಪಂಕ್ತಿಗಳು ಅಸ್ತವ್ಯಸ್ತಗೊಂಡವು. ಹೀಗಾದಾಗ ಆನೆಗಳ ಸೊಂಡಿಲುಗಳನ್ನು ಕತ್ತರಿಸಲು ಹಝ್ರತ್ ಅಬೂಉಬೈದ ಆದೇಶಿಸಿದರು ಮತ್ತು ಸ್ವತಃ ಮುಂದಕ್ಕೆ ಧಾವಿಸಿ ಒಂದು ಆನೆಯ ಸೊಂಡಿಲನ್ನು ಮುರಿದರು. ಸೈನ್ಯದ ಇತರ ಮುಸ್ಲಿಮರು ಸಹ ಅದರಂತೆ ಮಾಡಿದರು. ಘೋರ ಯುದ್ಧ ನಡೆಯಿತು. ಹಝ್ರತ್ ಅಬೂಉಬೈದ ಅಲ್ಲದೇ ಆರು ವ್ಯಕ್ತಿಗಳು ಇಸ್ಲಾಮಿನ ಸೈನ್ಯದ ಧ್ವಜವನ್ನು ಹಿಡಿಯುತ್ತಾ ಒಬ್ಬರ ನಂತರ ಇನ್ನೊಬ್ಬರಂತೆ ಶಹೀದ್ ಆಗುತ್ತಾ ಹೋದರು.

ತಾರೀಖೆ ತಿಬರಿಯ ಒಂದು ವರದಿ ಹೀಗಿದೆ: ಹಝ್ರತ್ ಅಬೂಉಬೈದ(ರ)ರವರ ಮಡದಿ ದೌಮ್ಮರವರು ಯುದ್ಧಕ್ಕಿಂತ ಮೊದಲು ಒಂದು ಕನಸ್ಸನ್ನು ಕಂಡಿದ್ದರು ಅದರಲ್ಲಿ ಓರ್ವ ವ್ಯಕ್ತಿ ಆಕಾಶದಿಂದ ಒಂದು ಪಾತ್ರೆಯಲ್ಲಿ ಸ್ವರ್ಗದಿಂದ ಕುಡಿಯಲು ಪಾನೀಯವನ್ನು ತಂದಿರುತ್ತಾನೆ ಅದನ್ನು ಹಝ್ರತ್ ಅಬೂಉಬೈದ ಮತ್ತು ಜೈರ್ ಬಿನ್ ಅಬೂಉಬೈದರವರು ಅದನ್ನು ಕುಡಿದಿದ್ದಾರೆ. ಅದೇ ರೀತಿ ಅವರ ಕುಟುಂಬದ ಹಲವಾರು ಜನರು ಸಹ ಸದನ್ನು ಕುಡಿದಿರುತ್ತಾರೆ. ದೌಮ್ಮರವರು ತಮ್ಮ ಈ ಕನಸ್ಸನ್ನು ಅವರ ಗಂಡನಿಗೆ ತಿಳಿಸಿದರು. ಆಗ ಅವರು ಹೇಳಿದರು ಇದರ ಅರ್ಥ ಶಹಾದತ್ ಆಗಿದೆ. ತದನಂತರ ಹಝ್ರತ್ ಅಬೂ ಉಬೈದ(ರ) ರವರು ಜನರಿಗೆ ಒಂದು ವಸಿಯ್ಯತ್ತನ್ನು ಬರೆದರು ಅದೇನಂದರೆ ಒಂದು ವೇಳೆ ನಾನು ಶಹೀದ್ ಆದರೆ ಜಬರ್‌ರವರು ಸೇನಾಧಿಪತಿ ಆಗುವರು ಒಂದು ವೇಳೆ ಅವರು ಸಹ ಶಹೀದ್ ಆದರೆ ಇವರು ಇವರು ಸೇನಧಿಪತಿ ಆಗುವರು. ಹೀಗೆ ಯಾರು ಈ ಪಾತ್ರೆಯಿಂದ ಪಾನಿಯವನ್ನು ಸೇವಿಸಿದ್ದರೋ ಅವರೆಲ್ಲರನ್ನು ಹಝ್ರತ್ ಅಬೂಉಬೈದ(ರ)ರವರು ಕ್ರಮೇಣ ಸೇನಾಧಿಪತಿಯನ್ನಾಗಿ ನೇಮಿಸಿದರು. ದೌಮ್ಮರವರ ತಮ್ಮ ಈ ಕನಸ್ಸು ಅದೇ ರೀತಿ ನನಸಾಯಿತು. ಈ ಯುದ್ಧದಲ್ಲಿ ಹಝ್ರತ್ ಅಬೂಉಬೈದ(ರ) ಅವರ ನಂತರ ಹೇಳಿದಂತಹ 6 ಜನರು ಕ್ರಮೇಣವಾಗಿ ಇಸ್ಲಾಮಿನ ಧ್ವಜವನ್ನು ಹಿಡಿಯುತ್ತಾ ಒಬ್ಬರ ನಂತರ ಇನ್ನೊಬ್ಬರಂತೆ ಶಹೀದ್ ಆಗುತ್ತಾ ಹೋದರು. ಎಂಟನೇ ಕಮಾಂಡರ್ ಹಝ್ರತ್ ಮುಸ್ನಾ ಆಗಿದ್ದರು. ಅವರು ಇಸ್ಲಾಮಿನ ಸೈನ್ಯವನ್ನು ಪುನಃ ಕ್ರಮಪಡಿಸಿ ಶಕ್ತವಾದ ಆಕ್ರಮಣ ನಡೆಸಿದರು. ಹಝ್ರತ್ ಮುಸ್ನಾ ಸಹ ಗಾಯಾಳಾದರು. ಆದರೆ ಧೈರ್ಯದಿಂದ ಹೋರಾಡುತ್ತಾ ಫರಾತ್ ನದಿಯನ್ನು ಪಾರು ಮಾಡಿ ಮರಳಿಬಂದರು. ಈ ಯುದ್ಧದಲ್ಲಿ ಮುಸ್ಲಿಮರ ನಾಲ್ಕು ಸಾವಿರ ಜನರು ಹುತಾತ್ಮರಾದರು. ಅದೇ ವೇಳೆ ಇರಾನಿಯರ ಆರು ಸಾವಿರ ಜನರು ಕೊಲ್ಲಲ್ಪಟ್ಟರು. ಇರಾನಿನ ದರ್ಬಾರಿನ ಸಭಿಕರ ನಡುವೆ ಭಿನ್ನಾಭಿಪ್ರಾಯವೆದ್ದಿತು ಮತ್ತು ಬಹ್ಮನ್ ಜಾಝ್‌ವಿಯಗೆ ಮರಳಿ ಹೋಗಬೇಕಾಯಿತು. ಈ ರೀತಿಯಲ್ಲಿ ಈ ಯುದ್ಧದ ದುಷ್ಪರಿಣಾಮಗಳಿಂದ ಮುಸ್ಲಿಮರು ಸುರಕ್ಷಿತರಾದರು. (ತಾರೀಖ್ ಇಸ್ಲಾವ್ ಬಿಅಹದ್ ಹಝ್ರತ್ ಉಮರ್(ರ), ಪ್ರಬಂಧ ಮೀರ್ ಮುಹ್ಮೂದ್ ಅಹ್ಮದ್ ನಾಸಿರ್‌ಸಾಹಿಬ್, ಪುಟ–18–21) (ತಾರೀಖ್ ಅತ್ತಿಬರಿ ಅನುವಾದ, ಸಂಪುಟ–2, ಪುಟ–229, ನಫೀಸ್ ಅಕಾಡಮಿ ಕರಾಚಿ 2004) (ತಾರೀಖ್ ಇಬ್ನೆ ಖುಲ್ದೂನ್, ಅನುವಾದ, ಸಂಪುಟ–3, ಭಾಗ–1, ಪುಟ–270–273, ದಾರುಲ್ ಇಶಾಅತ್ ಕರಾಚಿ 2003) (ಅಲ್‌ಕಮಿಲ್ ಫಿತ್ತಾರೀಕ್ ಲಿಇಬ್ನೆ ಅಸೀರ್, ಪುಟ–311, ಬೈತುಲ್ ಅಫ್ಕಾರ್ ಅದ್ದೌಲಿಯ)

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಜಿಸರ್ ಯುದ್ಧದ ಬಗ್ಗೆ ಸ್ವಲ್ಪಮಟ್ಟಿಗೆ ಹೀಗೆ ಪ್ರಸ್ತಾಪಿಸಿರುವರು: ಇಸ್ಲಾಮಿಗೆ ಅನುಭವಿಸಬೇಕಾಗಿ ಬಂದ ಅತ್ಯಂತ ದೊಡ್ಡ ಮತ್ತು ಭಯಾನಕ ಸೋಲು ಜಿಸರ್ ಯುದ್ಧದಲ್ಲಾಗಿತ್ತು. ಮುಸ್ಲಿಮರ ಈ ನಷ್ಟ ಎಷ್ಟು ಅಪಾಯಕಾರಿಯಾಗಿತ್ತು ಎಂದರೆ, ಮದೀನ ತನಕ ಇದರಿಂದ ನಡುಗಿತು. ಹಝ್ರತ್ ಉಮರ್(ರ) ಮದೀನದ ನಿವಾಸಿಗಳನ್ನು ಒಟ್ಟುಸೇರಿಸಿದರು ಮತ್ತು ಹೀಗೆ ಹೇಳಿದರು: ಈಗ ಮದೀನ ಮತ್ತು ಇರಾನಿನ ನಡುವೆ ಯಾವುದೇ ತಡೆಯಿಲ್ಲ. ಮದೀನ ಈಗ ಪೂರ್ಣವಾಗಿ ಅಸುರಕ್ಷಿತವಾಗಿದೆ ಮತ್ತು ಶತ್ರುಗಳು ಕೆಲವು ದಿನಗಳಲ್ಲಿ ಇಲ್ಲಿ ತಲುಪುವ ಸಾಧ್ಯತೆಯಿದೆ. ಆದ್ದರಿಂದ ನಾನು ಸ್ವತಃ ಸೇನಾಧಿಪತಿಯಾಗಿ ಹೋಗಲು ಬಯಸುತ್ತೇನೆ. ಇತರ ಜನರು ಈ ಅಭಿಪ್ರಾಯವನ್ನು ಇಷ್ಟಪಟ್ಟರು. ಆದರೆ ಹಝ್ರತ್ ಅಲಿ(ರ) ಹೇಳಿದರು: "ಒಂದು ವೇಳೆ ನೀವು ಕೊಲ್ಲಲ್ಪಟ್ಟರೆ ಮುಸ್ಲಿಮರು ಚದುರಿಹೋಗುವರು. ಅವರ ಲಾಡಿ ಸಂಪೂರ್ಣವಾಗಿಯೂ ಪಸರಿಸುವುದು. ಆದ್ದರಿಂದ ಬೇರೆ ಯಾರನ್ನಾದರೂ ಕಳುಹಿಸಬೇಕು. ನೀವು ಸ್ವತಃ ಹೋಗಬೇಡಿರಿ." ಆಗ ಸಿರಿಯದಲ್ಲಿ ರೋಮನ್ನರ

ವಿರುದ್ಧ ಯುದ್ಧದಲ್ಲಿ ನಿರತರಾಗಿದ್ದ ಹಝ್ರತ್ ಸಅದ್‌ರಿಗೆ(ರ) ಹಝ್ರತ್ ಉಮರ್(ರ) ಹೀಗೆ ಪತ್ರ ಬರೆದರು: "ಸಾಧ್ಯವಾದಷ್ಟು ಸೈನಿಕರನ್ನು ಕಳುಹಿಸಿರಿ. ಏಕೆಂದರೆ ಈಗ ಮದೀನ ಪೂರ್ಣವಾಗಿಯೂ ಅಸುರಕ್ಷಿತಗೊಂಡಿದೆ. ಶತ್ರುಗಳನ್ನು ಬೇಗನೇ ತಡೆಯದಿದ್ದರೆ ಮದೀನ ವಶಪಡಿಸಲ್ಪಡುವುದು." (ಮಕ್ಲಿಸ್ ಖುದ್ದಾಮುಲ್ ಅಹ್ಮದಿಯಾ ಕೆ ಸಾಲಾನ ಇಜ್ತಿಮಾ......, ಅನ್ವಾರುಲ್ ಉಲೂಮ್, ಸಂಪುಟ-22, ಪುಟ-56-57)

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾಅಲ್ಲಾಹ್. ಇವು ಯುದ್ಧಗಳ ಬಗ್ಗೆಯಿರುವ ಪ್ರಸ್ತಾಪವಾಗಿತ್ತು. ಬಾಕಿಯಿರುವ ಯುದ್ಧಗಳ ಹೆಚ್ಚಿನ ವಿಶದ ವಿವರಣೆಗಳು ಮುಂದಿನ ಬಾರಿ ವಿವರಿಸಲಾಗುವುದು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್. ಅವರಲ್ಲಿ ಮೊದಲ ಪ್ರಸ್ತಾಪ ಫತೀಹ್ ಅಬ್ದುಸ್ಸಲಾಂ ಮುಬಾರಕ್ ಸಾಹಿಬ್‌ರದ್ದಾಗಿದೆ. ಈಜಿಪ್ಟಿನವರಾಗಿದ್ದರು. 75ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆ ನಖ್ಷ್‌ಬಂಧಿ ವಿಭಾಗದವರಾಗಿದ್ದರು. ಅವರು ತನ್ನ ಒಂದು ಮಗುವನ್ನು ಧಾರ್ಮಿಕ ಶಿಕ್ಷಣಕ್ಕಾಗಿ ವಖ್ಫ್ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದರು. ಅದಕ್ಕಾಗಿ ಫತೀಹ್ ಸಾಹಿಬ್‌ರನ್ನು ಆಯ್ಕೆ ಮಾಡಿದ್ದರು. ಫತೀಹ್ ಸಾಹಿಬ್ 10ನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ್ದರು. ಪವಿತ್ರ ಖುರ್‌ಆನಿನೊಂದಿಗಿನ ಪ್ರೇಮದ ಕಾರಣದಿಂದ ಫತೀಹ್ ಸಾಹಿಬ್‌ರ ತಂದೆಯೂ ಅವರೊಂದಿಗೆ ಪವಿತ್ರ ಖುರ್‌ಆನ್ ಕಂಠಪಾಠ ಮಾಡಲು ಶುರುಮಾಡಿದರು ಮತ್ತು ಪೂರ್ಣವಾಗಿ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದರು. ಅನಂತರ ಅಲ್ಲಾಹನ ಅನುಗ್ರಹದಿಂದ ಅವರ ತಂದೆಯೂ 88ನೇ ವಯಸ್ಸಿನಲ್ಲಿ ಬೈಅತ್ ಸಹ ಮಾಡಿದರು. ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ ನಂತರ ಫತೀಹ್ ಸಾಹಿಬ್‌ರು ಅಲ್‌ಅಝ್‌ಹರ್‌ನ ಅಡಿಯಲ್ಲಿ ಒಂದು ಹೈಸ್ಕೂಲಿನಿಂದ ಉನ್ನತ ವಿಜಯದೊಂದಿಗೆ ಶಿಕ್ಷಣವನ್ನು ಪೂರ್ತಿ ಮಾಡಿದರು. ಅನಂತರ ಖಾಹಿರ ಯೂನಿವರ್ಸಿಟಿಯಿಂದ ಇಂಜಿನಿಯರಿಂಗ್‌ನಲ್ಲಿ ಡಿಗ್ರಿ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ ಓದುವ ಅತಿಯಾದ ಆಸಕ್ತಿಯ ಕಾರಣದಿಂದ ತನ್ನ ಜೇಬುಖರ್ಚಿನಿಂದ ಹಣವನ್ನು ಉಳಿತಾಯ ಮಾಡಿಕೊಂಡು ಪುಸ್ತಕಗಳನ್ನು ಖರೀದಿ ಮಾಡಿ ಓದುತ್ತಿದ್ದರು. ಅನಂತರ ಈಜಿಪ್ಟಿನ ಏರ್‌ಫೋರ್ಸಿನಲ್ಲಿ ಆಫೀಸರ್ ಆಗಿ ನಿಶ್ಚಯಿಸಲ್ಪಟ್ಟರು. ಅವರು ಕೆಲವು ಕ್ರಾಂತಿಕಾರಿ ಇಸ್ಲಾಮಿಕ ಮನ್ಸೂಬಗಳಲ್ಲಿ ಭಾಗಿಯಾಗಿರುವರು ಎಂದು ಅವರು ಸೈನ್ಯದಲ್ಲಿ ಇದ್ದಾಗ ಅವರ ಬಗ್ಗೆ ಆಕ್ಷೇಪವೆತ್ತಲಾಗಿತ್ತು. ಆದರೆ ಅವರು ಆ ಯೋಜನೆಗಳ ವಿರೋಧಿಯಾಗಿದ್ದರು. ಅವುಗಳನ್ನು ಸುಧಾರಿಸಲು ಪ್ರಯತ್ನ ಪಡುತ್ತಿದ್ದರು. ಹೇಗಿದ್ದರೂ ಈ ಆಕ್ಷೇಪದ ಕಾರಣದಿಂದ ಒಂದು ವರ್ಷ ಕಾಲ ಜೈಲುವಾಸದಲ್ಲಿ ಕಳೆದ ನಂತರ ಅವರನ್ನು ಬಿಡುಗಡೆಗೊಳಿಸಲಾಯಿತು. ಅನಂತರ ಅವರು ಇರಾಕಿಗೆ ಹೋದರು. ಅಲ್ಲಿ ಅವರು ಕೆಲವು ಕಾಲ ಇಂಜಿನಿಯರ್ ಆಗಿ ಕೆಲಸ ಮಾಡಿದರು. 1991ರಲ್ಲಿ ಇರಾಕಿನಲ್ಲಿ ಯುದ್ಧದ ವೇಳೆ ಅವರು ಬಹಳ ಅಪಾಯಕರವಾದ ಸ್ಥಿತಿಯಲ್ಲಿ ಕಳೆದರು. ಅವರು ನೆಲೆಸಿದ್ದ ಪ್ರದೇಶದಲ್ಲಿ ಒಂದು ರಾತ್ರಿ 10 ಬಾಂಬ್‌ಗಳು ಹಾಕಲಾಗಿತ್ತು. ಅವರು ತಮ್ಮ ಕುಟುಂಬದೊಂದಿಗೆ ಪ್ರಾರ್ಥನೆಯಲ್ಲಿ ನಿರತರಾದರು. ಅಲ್ಲಾಹನು ಅವರನ್ನು ಅದ್ಭುತಕರವಾದ ರೀತಿಯಲ್ಲಿ ಸಂರಕ್ಷಿಸಿದನು. ಅನಂತರ ಅವರು ಅರ್ದನಿಗೆ ಹೋದರು ಮತ್ತು ಮುತರ್ಝಿಲಿ ಪಂಗಡದಲ್ಲಿ ಸೇರಿದರು. ಅನಂತರ ಈಜಿಪ್ಟಿಗೆ ಬಂದರು. ಅಲ್ಲೇ ಖುರ್‌ಆನಿನ ಕಡೆಗೆ ಸ್ವಲ್ಪ ಮಟ್ಟಿಗೆ ಆಕರ್ಷಿತರಾಗಿದ್ದರು. ಅಷ್ಟರಲ್ಲಿ ಅಹ್ಮದಿಯಾ ಜಮಾಅತಿನ ಪರಿಚಯವಾಯಿತು. ಅಹ್ಮದಿಯ್ಯತ್ತಿನಲ್ಲಿ ಅವರಿಗೆ ಎಲ್ಲ ಕ್ಲಿಷ್ಟಕರವಾದ ಸಮಸ್ಯೆಗಳಿಗೆ ಉತ್ತರ ಲಭಿಸಿದಾಗ ಅವರು ಬೈಅತ್ ಮಾಡಿದರು. ಬೈಅತ್ತಿನ ಘಟನೆಯನ್ನು ಫತೀಹ್ ಸಾಹಿಬ್ ಸ್ವತಃ ವಿವರಿಸುತ್ತಾರೆ: 1995ರಲ್ಲಿ ಈಜಿಪ್ಟಿನಲ್ಲಿ ಇಬ್ನು ಖ್ಲಿಲ್‌ದೂನಿನ ಹೆಸರಲ್ಲಿ ಒಂದು ವಿದ್ಯಾ ಸಂಸ್ಥೆಯಲ್ಲಿ ಅನೇಕ ಲೆಕ್ಚರ್‌ಗಳು ನಡೆಯುತ್ತಿದ್ದುವು. ಅಲ್ಲಿ ನನಗೂ ಅನೇಕ ಬಾರಿ ಲೆಕ್ಚರ್ ನೀಡುವ ಮತ್ತು ವಿವಿಧ ವಿಷಯಗಳ ಮೇಲೆ ಇರುವ ಸವಾಲುಗಳಿಗೆ ಉತ್ತರ ಕೊಡುವ ಸೌಭಾಗ್ಯ ಲಭಿಸಿತು. 1998ರಲ್ಲಿ ಸನ್ಮಾನ್ಯ ಮುಸ್ತಫಾ ಸಾಬಿರ್ ಸಾಹಿಬ್‌ರು ಈ ವಿದ್ಯಾ ಕೇಂದ್ರದಲ್ಲಿ ನನ್ನ ಲೆಕ್ಚರನ್ನು ಕೇಳಿದಾಗ, ಅದನ್ನು ಬಹಳವಾಗಿ ಹೊಗಳಿದರು ಮತ್ತು ಅವರ ಮನೆಗೆ ಆಮಂತ್ರಿಸಿದರು. ಅಲ್ಲಿ ಅವರು ಮೂರು ಘಂಟೆಯ ಒಂದು ವೀಡಿಯೋ ಕೇಸಟನ್ನು ಹಾಕಿ ತೋರಿಸಿದರು. ಅದರಲ್ಲಿ ಮರ್ಹೂಂ ಇಲ್ಮಿ ಶಾಫಿ ಸಾಹಿಬ್‌ರು ದಜ್ಜಾಲಿನ ಕುರಿತು ಹದೀಸುಗಳಲ್ಲಿ ಇರುವ ವಿಷಯಗಳನ್ನು ಬಹಳ ಉತ್ತಮವಾಗಿ ವ್ಯಾಖ್ಯಾನಿಸಿದರು. ಅದು ನನಗೆ ತುಂಬ ಇಷ್ಟವಾಯಿತು. ನಾನು ಇದರ ಬಗ್ಗೆ ಸಾಬಿರ್ ಸಾಹಿಬ್‌ರೊಡನೆ ಕೇಳಿದಾಗ, ಅವರು ಹೇಳಿದರು: ಇದು ದಜ್ಜಾಲಿನ ಹಂತಕನಾದ ಹಝ್ರತ್ ಮಸೀಹ್ ಮೌಊದ್‌ರ ವ್ಯಾಖ್ಯಾನವಾಗಿದೆ. 1999ರಲ್ಲಿ ಮುಸ್ತಫಾ ಸಾಬಿರ್ ಸಾಹಿಬ್‌ರು ನನಗೆ ಇಸ್ಲಾಂ ಧರ್ಮ ತತ್ವಜ್ಞಾನ ಎಂಬ ಗ್ರಂಥವನ್ನು ನೀಡಿದರು. ಅದು ನನ್ನೊಳಗೆ ಒಂದು ವಿಸ್ಮಯಕರವಾದ ಬದಲಾವಣೆಯನ್ನು ಉಂಟುಮಾಡಿತ್ತು. ಇಮಾಂ ಮಹ್‌ದೀ ಅಲೈಹಿಸ್ಸಲಾಮರ ಬಗ್ಗೆ ವಿಶದವಾಗಿ ಸಂಶೋಧನೆ ನಡೆಸಲು ನಾನು ತೀರ್ಮಾನಿಸಿದೆ. ನಾಸಿಖ್ ಮನ್‌ಸೂಖಿನ ಸಿದ್ಧಾಂತ ತಪ್ಪು ಮತ್ತು ಪವಿತ್ರ ಖುರ್‌ಆನಿನ ಪರಿಶುದ್ಧತೆಗೆ ವಿರುದ್ಧವೆಂದು ನಾನು ನನ್ನ ಸ್ವಂತ ಸಂಶೋಧನೆಯಿಂದ ತಿಳಿದಿದ್ದೆ ಮತ್ತು ನಾನು ಧಾರ್ಮಿಕ ಸ್ವಾತಂತ್ರ್ಯದಲ್ಲಿ ವಿಶ್ವಾಸವನ್ನು ಹೊಂದಿದ್ದೆ. ಅಹ್ಮದಿಯ್ಯತ್ತಿನ ಬಗ್ಗೆ ಶೋಧನೆ ನಡೆಸಿದಾಗ, ಅಹ್ಮದಿಯ್ಯತ್ ಇವೆಲ್ಲ ಸಂಗತಿಗಳನ್ನು ಪ್ರಚಾರ ಮಾಡುತ್ತಿದೆ ಎಂದು ನಾನು ಕಂಡೆನು. ಅನಂತರ ಪವಿತ್ರ ಖುರ್‌ಆನಿನ ಕೆಲವು ಆಯತುಗಳ ಬಗ್ಗೆ ಸವಾಲುಗಳನ್ನು ಕೇಳಿದಾಗ, ಮುಸ್ತಫಾ ಸಾಬಿರ್ ಸಾಹಿಬ್‌ರು ನನಗೆ ಫೈವ್ ವಾಲ್ಯೂ..... ನೀಡಿದರು ಮತ್ತು ಇದರಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಇವೆಯೆಂದು ಹೇಳಿದರು. ನಾನು ನೋಡಿದಾಗ, ಅದರಲ್ಲಿ ನನ್ನ ಎಲ್ಲ ಸವಾಲುಗಳಿಗೆ ಉತ್ತರಗಳು ನನ್ನದೇ ಚಿಂತನೆಗಳ ಮತ್ತು ಪ್ರತೀಕ್ಷೆಗಳ ಪ್ರಕಾರವಿದ್ದುವು. ಅಲ್ಲಾಹನ ಕಡೆಯಿಂದ ದಿವ್ಯವಾಣಿ ಲಭಿಸುತ್ತಿವೆ ಎಂದು ಸುಳ್ಳಾಗಿ ವಾದಿಸುವುದು ದೊಡ್ಡದಾದ ಅಕ್ರಮವಾಗಿದೆ, ಆದರೆ ಇಮಾಂ ಮಹ್‌ದೀ ಅಲೈಹಿಸ್ಸಲಾಂ ತಂದ ಎಲ್ಲ ಕಾರ್ಯಗಳು ಸತ್ಯ, ಸನ್ಮಾರ್ಗ ಮತ್ತು ಆಧ್ಯಾತ್ಮಿಕ ವಿಷಯಗಳನ್ನು ಒಳಗೊಂಡಿದೆ ಎಂಬುದರ ಬಗ್ಗೆ ನಾನು ಬಹಳ ಆಲೋಚಿಸಿದೆ. ಒಂದೆರಡು ಅರ್ಥಗಳನ್ನು ಯಾರು ಬೇಕಾದರೂ ಹೇಳಬಹುದು ಆದರೆ, ಇಷ್ಟೆಲ್ಲ ಸತ್ಯವಾದ ಅರ್ಥಗಳು ಮತ್ತು ಇಷ್ಟು ಹೆಚ್ಚು ಪ್ರಮಾಣದಲ್ಲಿ ಈ ಶತಮಾನದಲ್ಲೇ ಅಲ್ಲಾಹನು ಬೇರೆ ಯಾರಿಗೂ ದಯಪಾಲಿಸಿಲ್ಲ. ಹೀಗಿರುವಾಗ ಹಿರಿದಾದ ಅಕ್ರಮವನ್ನು ಮಾಡುತ್ತಾ ದಿವ್ಯವಾಣಿ ಲಭಿಸುವುದಾಗಿ ವಾದಿಸುವ ಒಬ್ಬ ವ್ಯಕ್ತಿಗೆ ಅಲ್ಲಾಹನು ಇಂತಹ ಮಹತ್ತಾದ ಅನುಗ್ರಹವನ್ನು ದಯಪಾಲಿಸುವನೇ? ಕೊನೆಗೆ ದುಆ ಮಾಡುತ್ತಾ, ಓದುತ್ತಾ, ಚಿಂತನ ಮಂಥನ ಮಾಡುತ್ತಾ 2001ರಲ್ಲಿ ಮುಸ್ತಫ ಸಾಬಿರ್ ಸಾಹಿಬ್ ಈಜಿಪ್ಟಿಗೆ ಬಂದಾಗ, ನಾನು ಹಝ್ರತ್ ಮಸೀಹ್ ಮೌಊದ್‌ರಲ್ಲಿ ವಿಶ್ವಾಸವನ್ನು ಇರಿಸಿದ್ದೇನೆ ಎಂದು ಅವರೊಡನೆ ಹೇಳಿದೆ. ಅತಿಯಾದ ಜಝ್‌ಬಾತಿನ ಕಾರಣದಿಂದ ಒಂದು ಕ್ಷಣಕ್ಕೆ ಅವರಿಗೆ ನನ್ನ ಮಾತನ್ನು ನಂಬಲಾಗಲಿಲ್ಲ. ಅನಂತರ ನಾನು ಹಝ್ರತ್ ಮಸೀಹ್ ಮೌಊದ್‌ರ ಅರಬೀ ಗ್ರಂಥಗಳನ್ನು ಓದಲು ಶುರುಮಾಡಿದೆ. ಅರ್ಥಗಳ ಮತ್ತು ತಾತ್ಪರ್ಯಗಳ ಒಂದು ವಿಶಾಲ ಕಡಲು ನನ್ನ ಮುಂದೆ ಅಲೆಯಾಡಲು ಆರಂಭಿಸಿತು.

ಫತೀಹ್ ಸಾಹಿಬ್‌ರ ಜ್ಞಾನಪರವಾದ ಸೇವೆಗಳು ಇಂತಿವೆ: 2005ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಪುಸ್ತಕವಾದ ಲೈಫ್ ಆಫ್ ಮುಹಮ್ಮದ್‌ನ್ನು ಇಂಗ್ಲಿಷಿನಿಂದ ಅರಬಿಗೆ ತರ್ಜುಮೆ ಮಾಡಿದರು. ಅಲ್‌ಹವಾರಿಲ್ ಮುಬಾಶಿರಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಬಹಳ ಆವೇಶದಿಂದ ಸಾಕ್ಷ್ಯಾಧಾರಿತ ಮತ್ತು ವಿಶದವಾದ ಉತ್ತರಗಳನ್ನು ನೀಡುತ್ತಿದ್ದರು. ಅವುಗಳನ್ನು ಜನರು ಬಹಳ ಇಷ್ಟಪಡುತ್ತಿದ್ದರು. ಈಜಿಪ್ಟಿನ ಒಬ್ಬ ಕ್ರೈಸ್ತ ಪಾದರಿ ಪವಿತ್ರ ಖುರ್‌ಆನಿನ ಮೇಲೆ ಆಕ್ಷೇಪಗಳನ್ನು ಹೊಂದಿದ್ದ ಒಂದು ಸೀರೀಸ್ ನಡೆಸಿದನು. ಅದರ ಶೀರ್ಷಿಕೆ ಹಲಿಲ್ ಖುರ್‌ಆನ ಕಲಾಮುಲ್ಲಾಹ್ ಎಂದಾಗಿತ್ತು. ಎಂದರೆ ಪವಿತ್ರ ಖುರ್‌ಆನ್ ಅಲ್ಲಾಹನ ವಚನವೇ? ಅದಕ್ಕೆ ಉತ್ತರವಾಗಿ ಫತೀಹ್ ಸಾಹಿಬ್‌ರು 2006ರಲ್ಲಿ ಕಾರ್ಯಕ್ರಮಗಳ ಒಂದು ಸೀರೀಸ್ ರಿಕಾರ್ಡ್ ಮಾಡಿದರು. ನಅಮ್ ಇನ್ನಹೂ ಕಲಾಮುಲ್ಲಾಹ್. ಎಂದರೆ ಹೌದು, ನಿಸ್ಸಂಶಯವಾಗಿಯೂ ಇದು ಅಲ್ಲಾಹನ ವಚನಗಳಾಗಿವೆ. ಹಝ್ರತ್ ಮಸೀಹ್ ಮೌಊದ್‌ರ ಅರಬಿ ಖಸೀದಗಳ ವ್ಯಾಖ್ಯಾನವನ್ನು ಒಳಗೊಂಡ, ರೂಹುಲ್ ಖುದುಸ್ ಎಂಬ ಹೆಸರಲ್ಲಿ ಒಂದು ಪ್ರೋಗ್ರಾಂ ನಡೆಸಿದರು. ಅದರಲ್ಲಿ ಖಸೀದಗಳ ಪದ ಮತ್ತು ಅರ್ಥಗಳ ಅದ್ಭುತಗಳನ್ನು ಬಹಳ ಸುಂದರವಾದ ಶೈಲಿಯಲ್ಲಿ ವಿವರಿಸಿದರು. ಅದಲ್ಲದೇ ಅನೇಕ ಪ್ರೋಗ್ರಾಮ್‌ಗಳಲ್ಲಿ ಭಾಗವಹಿಸುತ್ತಿದ್ದರು. ನುಬುವ್ವತೇ ತಹಖ್ಖುಖತ್ ಎಂದರೆ ಈಡೇರಿಲ್ಪಟ್ಟ ಭವಿಷ್ಯವಾಣಿಗಳು, ಬರಹೀನೇ ಅಹ್ಮದಿಯದ ದಿವ್ಯಜ್ಞಾನ, ಇಸ್ಲಾಮಿನ ಚರಿತ್ರೆ ಮತ್ತು ಖಾತಮುನ್ನಬಿಯ್ಯೀನ್ ಇತ್ಯಾದಿಗಳು ಸೇರಿವೆ.

ಇವಲ್ಲದೇ ಅವರು ಬೇರೆ ಜಮಾಅತಿನ ಸೇವೆಗಳನ್ನು ಸಹ ಮಾಡಿದ್ದರು. ಲೋಕಲ್ ಜಮಾಅತಿನಲ್ಲಿ ಒಂದು ದೀರ್ಘ ಕಾಲ ಸೆಕ್ರಟರಿ ತಬ್ಲೀಗ್ ಆಗಿ ಸೇವೆ ಸಲ್ಲಿಸುತ್ತಿದ್ದರು. ತನ್ನನ್ನು ವಖ್ಫಿಗಾಗಿಯೂ ಸಮರ್ಪಿಸಿದರು. ಅನೇಕ ವರ್ಷಗಳು ವಖ್ಫೇ ಝಿಂದಗಿಯಾಗಿ ಜಮಾಅತಿನ ಸೇವೆ ಸಲ್ಲಿಸಿದರು. ಜಮಾಅತಿನ ಸೆಂಟರ್‌ಗಳಲ್ಲಿ ದರ್ಸುಗಳನ್ನು ಸಹ ನೀಡುತ್ತಿದ್ದರು.

ಅವರ ಮಗನಾದ ಇಬ್ರಾಹೀಂ ಫತೀಹ್ ಸಾಹಿಬ್‌ರು ಹೇಳುತ್ತಾರೆ: ನನ್ನ ತಂದೆ ಸೂರಃ ಫಾತಿಹದ ಬೆಳಕಿನಲ್ಲಿ ಪರಿಶುದ್ಧವಾದ ಜೀವನವನ್ನು

ನಡೆಸುವವರಾಗಿದ್ದರು. ಅವರ ಜೀವಿತ ಖಿಲಾಫತಿನ ಅನುಗ್ರಹದ ಪ್ರಕಾಶದಿಂದ ಅನುಗ್ರಹೀತವಾಗಿತ್ತು. ಖಲೀಫತುಲ್ ಮಸೀಹ್‌ರೊಡನೆ ಪ್ರೇಮ ಮತ್ತು ಗೌರವದ ವಿಸ್ಮಯಕರವಾದ ಭಾವನೆಗಳನ್ನು ಹೊಂದಿದ್ದರು. ಅವರ ಪ್ರಕಾರ ಎಲ್ಲ ದುಃಖಗಳ ಪರಿಹಾರ ಮತ್ತು ಎಲ್ಲ ಕಷ್ಟತೆಗಳ ಅರಿಯಲು ಹಾಗೂ ಅಲ್ಲಾಹನ ಕಡೆಗೆ ಹೋಗಲು ಇರುವ ಒಂದೇ ಮಾರ್ಗ ಖಿಲಾಫತ್ ಆಗಿತ್ತು. ಮಾತು ಮತ್ತು ಕೃತಿಯಲ್ಲಿ ಪರಿಪೂರ್ಣವಾದ ಸತ್ಯಸಂಧತೆಯೊಂದಿಗೆ ವರ್ತಿಸುವುದರಲ್ಲಿ ಅವರು ಪ್ರಸಿದ್ಧರಾಗಿದ್ದರು. ಎಲ್ಲ ಕೆಲಸಗಳಿಗೆ ಮುಂಚೆ ಸದಾ ಪ್ರಾರ್ಥನೆ ಮತ್ತು ಅಲ್ಲಾಹನ ಮುಂದೆ ಬಾಗುತ್ತಿದ್ದರು. ಅವರೊಡನೆ ಯಾರಾದರೂ ಉಪದೇಶಿಸಲು ಹೇಳಿದರೆ, ದುಆ ಮಾಡಲು, ಅಲ್ಲಾಹನೊಡನೆ ಸನ್ಮಾರ್ಗವನ್ನು ಬೇಡಲು ಮತ್ತು ಖಲೀಫತುಲ್ ಮಸೀಹ್‌ರಿಗೆ ದುಆಗಾಗಿ ಬರೆಯಲು ಹೇಳುತ್ತಿದ್ದರು. ಅವರು ಆಳವಾದ ಅರಿವು ಮತ್ತು ವಿಶಾಲವಾದ ತಿಳುವಳಿಕೆಯನ್ನು ಹೊಂದಿದ್ದರು. ಬಹಳವಾಗಿ ಓದಿದವರಾಗಿದ್ದರು. ಎಲ್ಲ ಅರಿವಿನ ಪುಸ್ತಕಗಳನ್ನು ಓದುತ್ತಿದ್ದರು, ಹೊಸ ಚಿಂತನೆ ಮತ್ತು ಹೊಸ ಸಂಶೋಧನೆಗಳನ್ನು ಅರಿಯಲು ಪ್ರಯತ್ನಿಸುತ್ತಿದ್ದರು. ಓದಿದ್ದನ್ನು ಅರಿಯಲು ಮತ್ತು ಅರಿವಿನ ಸೂಕ್ಷ್ಮವಾದ ಧಾರ್ಮಿಕ ವಿಷಯಗಳನ್ನು ಅರಿಯಲು ಮತ್ತು ಇತರರಿಗೆ ಹೇಳಿಕೊಡುವುದರಲ್ಲಿ ನಿರತರಾಗುತ್ತಿದ್ದರು. ಕಲಿಸುವ ಅವರ ಶೈಲಿ ಬಹಳ ಸುಂದರವಾಗಿತ್ತು. ಆ ನಡುವೆ ತಮಾಷೆ ಕೂಡ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್‌ರ ಪುಸ್ತಕಗಳನ್ನು ಸದಾ ಓದುತ್ತಿದ್ದರು. ಅದರಿಂದ ಜ್ಞಾನದ ಮುತ್ತುಗಳನ್ನು ತೆಗೆದು ತನ್ನ ದಿನನಿತ್ಯದ ಜೀವಿತದ ಮಾರ್ಗದೀಪವನ್ನಾಗಿ ಮಾಡುತ್ತಿದ್ದರು. ಜುಮಾ ದಿವಸ ತನ್ನ ಲೆಕ್ಚರ್‌ನಲ್ಲಿ ಮತ್ತು ಎಂ.ಟಿ.ಎ.ಯ ಪ್ರೋಗ್ರಾಮುಗಳಲ್ಲಿ ಈ ಅರಿವನ್ನು ಹೇಳುತ್ತಿದ್ದರು. ಧಾರ್ಮಿಕ ಸೇವೆಯ ಆವೇಶ ಅವರಿಗೆ ತುಂಬಾ ಇತ್ತು. ಆಸ್ಪತ್ರೆಯಲ್ಲಿ ರೋಗಿಯಾಗಿದ್ದಾಗ, ಶ್ವಾಸ ತೆಗೆಯಲು ಕಷ್ಟವಿದ್ದು ಕೂಡ ನರ್ಸ್‌ಗಳಿಗೆ ಅಹ್ಮದಿಯ್ಯತಿನ ತಬ್ಲೀಗ್ ಮಾಡುತ್ತಿದ್ದರು. ಯಾವ ಉನ್ನತ ನೈತಿಕ ಗುಣ ಮತ್ತು ಶ್ರೇಷ್ಠ ಸ್ವಭಾವದ ಬಗ್ಗೆ ಹೇಳುತ್ತಿದ್ದರೋ ಅವುಗಳ ಪ್ರಕಾರ ನಡೆಯುತ್ತಿದ್ದರು. ಕಷ್ಟ ಮತ್ತು ಸುಖದಲ್ಲಿ ಸತ್ಯ ಮತ್ತು ದೇವಭಕ್ತಿಯೊಂದಿಗೆ ಅಂಟಿಕೊಂಡಿದ್ದರು. ಅಲ್ಲಾಹನೊಂದಿಗೆ ಭೇಟಿಯ ಅವರಿಗೆ ಬಹಳ ಅವೇಶವಿತ್ತು. ಈ ಲೋಕಕ್ಕೆ ಯಾವುದೇ ಬೆಲೆಯಿಲ್ಲ, ಪರಲೋಕಕ್ಕಾಗಿ ಸತ್ಕರ್ಮಗಳನ್ನು ಮಾಡುವುದೇ ಮುಕ್ತಿಯ ಮಾರ್ಗವಾಗಿದೆ ಎಂದು ಹೆಚ್ಚಾಗಿ ಹೇಳುತ್ತಿದ್ದರು. ಅಲ್ಲಾಹನನ್ನು ಭೇಟಿಯಾಗುವ ಆಸಕ್ತಿಯ ಮಾತುಗಳನ್ನು ಹೆಚ್ಚಾಗಿ ಹೇಳುತ್ತಿದ್ದರು. ಅವರು ಮಗನು ಹೇಳುತ್ತಾರೆ: ನನ್ನನ್ನು ದುಃಖದಲ್ಲಿ ಕಾಣುವಾಗ ನನ್ನ ತಂದೆ ಹೀಗೆ ಹೇಳುತ್ತಿದ್ದರು: ನನ್ನ ಸಮೀಪ ಕುಳಿತುಕೊಂಡು ಸೂರಃ ಫಾತಿಹ ಮತ್ತು ದುರೂದ್ ಶರೀಫ್ ಓದು, ಏಕೆಂದರೆ ರೋಗದಿಂದ ಶಮನ ಅಲ್ಲಾಹನ ಇಚ್ಛೆಯ ಪ್ರಕಾರ ಆಗುತ್ತದೆ. ಅವನಿಗೆ ಮಾತ್ರ ಮದ್ದಿನ ಅರಿವು ಇರುತ್ತದೆ. ವೈದ್ಯ ಅವನ ಇಂಗಿತವಿಲ್ಲದೇ ಏನೂ ಮಾಡಲು ಸಾಧ್ಯವಿಲ್ಲ. ನನಗೆ ಲೋಕದ ಯಾವುದೇ ಪರಿವೆಯಿಲ್ಲ. ಬದಲಾಗಿ ಅಲ್ಲಾಹನ ಭೇಟಿಯ ಅಭಿರುಚಿಯಿದೆ. ಮಗನು ಬರೆಯುತ್ತಾನೆ: ನನ್ನ ತಾಯಿ ಹೇಳುತ್ತಿದ್ದರು: ನನ್ನ ಪತಿ ಸದಾ ಜಮಾಅತಿನ ಸೇವೆಗೆ ಇತರ ಎಲ್ಲ ಕೆಲಸಗಳ ಮೇಲೆ ಆದ್ಯತೆ ನೀಡುತ್ತಿದ್ದರು. ಹೆಚ್ಚಿನ ಸಮಯ ಹೊರಗೆ ತಬ್ಲೀಗಿನಲ್ಲಿ ಕಳೆಯುತ್ತಿದ್ದರು. ಅದೇ ಅನುಗ್ರಹದಿಂದ ನಮ್ಮ ಮಕ್ಕಳನ್ನು ಸಹ ಅಲ್ಲಾಹನು ಅದ್ಭುತಕರವಾದ ರೀತಿಯಲ್ಲಿ ಸಂರಕ್ಷಿಸುತ್ತಿದ್ದನು.

ಡಾಕ್ಟರ್ ಹಾತಿಂ ಹಿಲ್ಮಿ ಶಾಫಿ ಸಾಹಿಬ್‌ರು ಹೇಳುತ್ತಾರೆ: ಸತ್ಯವಿಶ್ವಾಸಿಗಳಲ್ಲಿ ಕೆಲವರು ಅಲ್ಲಾಹನೊಂದಿಗೆ ಮಾಡಿರುವ ಪ್ರತಿಜ್ಞೆಯನ್ನು ಈಡೇರಿಸಿರುವರು ಎಂದು ಅಲ್ಲಾಹನು ಯಾರ ಬಗ್ಗೆ ಹೇಳಿರುವನೋ ಅಂತಹ ಜನರಲ್ಲಿ ನಮ್ಮ ಸಹೋದರ ಮತ್ತು ಅಧ್ಯಾಪಕರಾದ ಸನ್ಮಾನ್ಯ ಫತೀಹ್ ಅಬ್ದುಸ್ಸಲಾಂ ಸಾಹಿಬ್‌ರು, ನಿಜವಾಗಿಯೂ ಸೇರಿರುವರು. ಬೈಅತ್ತಿನಿಂದ ನಿಧನದ ತನಕದ ಕಾಲದ ತನಕ ಅವರನ್ನು ನಾನು ಒಬ್ಬ ಅದ್ಭುತಕರವಾದ ವ್ಯಕ್ತಿಯಾಗಿ ಕಂಡಿರುವೆನು. ಅವರಿಗೆ ಅಲ್ಲಾಹನು ಮತ್ತು ಅವನ ಗುಣಗಳು ಹಾಗೂ ಅವನ ಏಕತೆಯಲ್ಲಿ ಪ್ರೇಮದ ಮತ್ತಿತ್ತು. ಹಝ್ರತ್ ಪೈಗಂಬರ್(ಸ) ಮತ್ತು ಪವಿತ್ರ ಖುರ್‌ಆನಿನ ಪ್ರೇಮಿಯಾಗಿದ್ದರು. ಸೂರಃ ಫಾತಿಹದ ಪ್ರೇಮದಲ್ಲಿ ಲೀನವಾಗಿದ್ದರು. ತನ್ನ ಅಮೂಲ್ಯವಾದ ದರ್ಸ್‌ಗಳಲ್ಲಿ ಹಝ್ರತ್ ಮಸೀಹ್ ಮೌಊದ್‌ರ ಸೂರಃ ಫಾತಿಹದ ವ್ಯಾಖ್ಯಾನದ ಆಕಾಶದಲ್ಲಿ ಹಾರಾಡುತ್ತಾ ಅವರನ್ನು ಕಾಣುತ್ತಿದ್ದೆವು.

ಹುಸೈನುಲ್ ಮಿಸ್ರೀ ಸಾಹಿಬ್‌ರು ಅರ್ದನಿನಿಂದ ಬರೆಯುತ್ತಾರೆ: ಫತೀಹ್ ಸಾಹಿಬ್‌ರು ಹಝ್ರತ್ ಮಸೀಹ್ ಮೌಊದ್‌ರ ಮತ್ತು ಖಾದಿಯಾನಿನ ಪ್ರೇಮಿಯಾಗಿದ್ದರು. ಖಿಲಾಫತಿನೊಂದಿಗೆ ಅವರಿಗೆ ಸುದೃಢವಾದ ವಿಶ್ವಾಸವಿತ್ತು. ಹಿರಿಯ ಜ್ಞಾನಿಯಾಗಿದ್ದರು. ಅನಂತರ ತನ್ನ ಘಟನೆಯನ್ನು ವಿವರಿಸುತ್ತಾರೆ: ಖಾದಿಯಾನಿನ 2018ರ ಜಲ್ಸದಲ್ಲಿ ನಾವು ಒಟ್ಟಿಗೆ ಭಾಗವಹಿಸಿದ್ದೆವು. ನಾನು ಖಾದಿಯಾನಿಗೆ ತಲುಪಿದಾಗ ನನ್ನನ್ನು ಸರಾಯೇ ವಸೀಮಿನಲ್ಲಿ ವಸತಿಯನ್ನು ಏರ್ಪಡಿಸಲಾಗಿತ್ತು. ಅಲ್ಲಿ ಫತೀಹ್ ಸಾಹಿಬ್ ಬಹಳ ಪ್ರೀತಿಯಿಂದ ಭೇಟಿಯಾದರು. ಜಲ್ಸದ ಕಾರ್ಯಕ್ರಮದ ನಂತರ ರಾತ್ರಿ ನನ್ನೊಂದಿಗೆ ಬರಾಹೀನೆ ಅಹ್ಮದಿಯದ ಬಗ್ಗೆ ಮಾತುಕತೆ ನಡೆಸುತ್ತಿದ್ದರು. ಅವರಿಗೆ ಖಾದಿಯಾನಿನೊಂದಿಗೆ ಪ್ರೇಮವಿತ್ತು. ಇದು ನಮ್ಮ ಪ್ರೇಮಿಯ ಪ್ರೀತಿಯ ಊರಾಗಿದೆ. ನಾವು ಒಟ್ಟಿಗೆ ಖಾದಿಯಾನಿನ ಪರಿಶುದ್ಧ ಸ್ಥಳಗಳನ್ನು ನೋಡಿದೆವು. ಫತೀಹ್ ಸಾಹಿಬ್‌ರಿಗೆ ಖಾದಿಯಾನಿನ ಪ್ರತಿಯೊಂದು ಸ್ಥಳದ ಮತ್ತು ಅದರ ಚರಿತ್ರೆಯ ವಿಶದವಾದ ಅರಿವು ಇತ್ತು. ಖಾದಿಯಾನಿನಿಂದ ಮರಳಿ ಹೋಗಲಿದ್ದ ದಿನದಂದು ನಾವು ಫಜ್ರ್ ನಮಾಝಿನ ನಂತರ ಬೈತುದ್ದಿಕ್ರ್ ಮತ್ತು ಬೈತುದ್ದುಆದಲ್ಲಿ ಹೋದೆವು. ಅಲ್ಲಿ ಅವರ ಅತ್ಯಂತ ವಿನಯವನ್ನು ನೋಡಿಕೊಂಡು ನನಗೆ ಸಹ ನಿಯಂತ್ರಿಸಲಾಗಲಿಲ್ಲ. ಅಲ್ಲಿಂದ ಹೊರಟು ಹೊರಗೆ ಹೋಗಿ ಬಹಿಶ್ತಿ ಮಖ್‌ಬರದ ಚೌಕಿಯಲ್ಲಿ ತಲುಪಿದಾಗ ಅಚ್ಚರಿ ಮತ್ತು ಚಿಂತೆಯಿಂದ ಅಲ್ಲಿಲ್ಲಿ ನೋಡುತ್ತಿದ್ದರು. ಅನಂತರ ಸ್ವಲ್ಪ ನಂತರ ನಾನು ಕೇಳುವಾಗ ಅಳುತ್ತಾ ಹೋಗುತ್ತಿದ್ದರು. ಅನಂತರ ನೆಲದಲ್ಲಿ ಸಜದ ಮಾಡಿದರು. ಅನಂತರ ಎದ್ದು ಆಕಾಶದ ಕಡೆಗೆ ಕೈಯನ್ನು ಎತ್ತಿಕೊಂಡು ನಡುಗುತ್ತಾ ಹೇಳಿದರು: ಹೇ ಅಲ್ಲಾಹ್, ನಿನ್ನ ಪ್ರಿಯನ ಜೊತೆಗೆ, ಪ್ರಿಯನ ನೆರಳಿನಲ್ಲಿ ಇರಲು ನನಗೆ ಎಷ್ಟು ಇಷ್ಟವೆಂದು ನಿನಗೆ ಗೊತ್ತಿದೆ. ಇಂದು ರಾತ್ರಿ ಇಲ್ಲೇ ಕಳೆಯಲು ಬಯಸುತ್ತಿದ್ದೇನೆ ಎಂದು ನಿನಗೆ ಗೊತ್ತು. ಆದರೆ ಕೆಲವು ಸಮಯದ ನಂತರ ಇಲ್ಲಿಂದ ಹೋಗುವ ಸಮಯವಾಗಲಿದೆ. ನೀನು ಎಲ್ಲ ಕಾರ್ಯದ ಮೇಲೆ ಸಾಮರ್ಥ್ಯವಿರುವವನಾಗಿರುವೆ. ಎಲ್ಲ ಕೆಲಸಗಳು ನಿನ್ನ ಕೈಯಲ್ಲಿದೆ. ನಿನ್ನ ಇಂಗಿತ ಪ್ರಕಾರ ಎಲ್ಲವೂ ಆಗುತ್ತವೆ, ಎಲ್ಲ ಕಾನೂನುಗಳು ನಡೆಯುತ್ತವೆ ಮತ್ತು ಬದಲಾಗುತ್ತವೆ. ನನ್ನ ಯಾತ್ರೆಯನ್ನು ಮುಂದೂಡು. ಹೀಗಾದರೆ ನನಗೆ ಕೆಲವು ಗಂಟೆಗಳಷ್ಟು ನನ್ನ ಕಣ್ಣುಗಳಿಗೆ ತಂಪು ಲಭಿಸುವುದು. ಅನಂತರ ಹೇಗಿದ್ದರೂ ಅವರಿಗೆ ಹೋಗಲಿರುವ ವಾಹನ ಬಂತು. ಫತೀಹ್ ಸಾಹಿಬ್‌ರ ಸಾಮಾನುಗಳನ್ನು ಅದರಲ್ಲಿ ಇರಿಸಲಾಯಿತು. ಕೆಲವು ಸಮಯದ ನಂತರ ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಎಂದು ಫತೀಹ್ ಸಾಹಿಬ್‌ರ ಘೋಷಣೆಯ ಸ್ವರ ಗೂಂಜಿತು. ಅವರು ಹೀಗೆ ಹೇಳಿದರು: ನನ್ನ ಕಾರುಣ್ಯವಂತನಾದ ಅಲ್ಲಾಹನು ನನ್ನ ಪ್ರಾರ್ಥನೆಯನ್ನು ಆಲಿಸಿದ್ದಾನೆ. ನನ್ನ ಯಾತ್ರೆಯನ್ನು ಮುಂದೂಡಿದ್ದಾನೆ. ಹೀಗೆ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದರಲ್ಲಿ ನಿರತರಾಗಿದ್ದರು. ನಾನು ಕೆಳಗೆ ಇಳಿದಾಗ ಅವರು ನನ್ನನ್ನು ಬಹಳ ಜೋರಾಗಿ ಆಲಂಗಿಸಿದರು ಮತ್ತು ನನ್ನೊಡನೆ ಹೀಗೆ ಹೇಳಿದರು: ಅಲ್ಲಾಹನು ಹೇಗೆ ನಮ್ಮ ಪ್ರಿಯ ಮಸೀಹ್ ಮೌಊದ್‌ರ ಅನುಗ್ರಹದಿಂದ ನಮ್ಮ ದುಆಗಳನ್ನು ಸ್ವೀಕರಿಸಿದ್ದಾನೆ ಮತ್ತು ಸ್ವೀಕರಿಸುತ್ತಾನೆ ಎಂದು ನೀವು ನೋಡಿದ್ದೀರಿ. ಅನಂತರ ಅವರ ಕಣ್ಣಿನಿಂದ ಕಣ್ಣೀರು ಬಂತು. ಅವರನ್ನು ನೋಡಿ ನನಗೂ ಕಣ್ಣೀರು ಬಂತು. ಅವರು ಹೇಳಿದರು: ನನ್ನ ಫ್ಲೈಟ್ ಇಂದು ಎಂದು ವ್ಯವಸ್ಥಾಪಕರು ತಪ್ಪಾಗಿ ಹೇಳಿದ್ದರು. ಅದು ಇಂದು ಅಲ್ಲ, ನಾಳೆ ಅಥವಾ ಬೇರೆ ಒಂದು ದಿನದಂದು ಆಗಿದೆ. ಫತೀಹ್ ಸಾಹಿಬ್‌ರಿಗೆ ತನ್ನ ಮರಣದ ಬಗ್ಗೆ ಸಹ ಗೊತ್ತಿತ್ತು. ಅದರ ಬಗ್ಗೆ ಅವರು ಹುಸೈನ್ ಸಾಹಿಬ್‌ರೊಡನೆ ಹೇಳಿದ್ದರು. ಎಂ.ಟಿ.ಎ.ಗಾಗಿ ಅವರು ಮಾಡುತ್ತಿದ್ದ ಪ್ರೋಗ್ರಾಂ ಹೇಗೆ ಮಾಡಬೇಕೆಂಬ ನಿರ್ದೇಶನ ಸಹ ಅವರು ಕೊಟ್ಟರು. ಹಝ್ರತ್ ಮಸೀಹ್ ಮೌಊದ್‌ರಿಗೆ ಹೀಗೆ ಒಂದು ಇಲ್‌ಹಾಂ ಅವತೀರ್ಣವಾಗಿತ್ತು: **ಯದ್‌ಊನ ಲಕ ಅಬ್ದಾಲುಶ್ಶಾಮ್ ವ ಇಬಾದಲ್ಲಾಹಿ ಮಿನ್ ಅರಬ್**. ಎಂದರೆ ನಿನಗಾಗಿ ಸಿರಿಯದ ದಾಸರು ದುಆ ಮಾಡುವರು ಮತ್ತು ಅರೇಬಿಯದ ದಾಸರು ದುಆ ಮಾಡುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಬರೆದಿರುವರು: ಈ ಸಂಗತಿ ಏನು, ಯಾವಾಗ ಮತ್ತು ಹೇಗೆ ಪ್ರಕಟವಾಗುವುದು ಎಂದು ಅಲ್ಲಾಹನೇ ಬಲ್ಲನು. (ತಝ್‌ಕಿರಃ, 4ನೇ ಆವೃತ್ತಿ, ಪುಟ-100)

ಆದರೆ ಹೇಗಿದ್ದರೂ ಎಲ್ಲೆಲ್ಲ ಅರೇಬಿಯದ ಜಮಾಅತುಗಳು ಸ್ಥಾಪನೆಯಾಗುತ್ತಿದ್ದೆಯೋ ಅಲ್ಲೆಲ್ಲ ಅಲ್ಲಾಹನು ಹೇಗೆ ನಿಷ್ಠಾವಂತರನ್ನು ಉಂಟುಮಾಡುತ್ತಿದ್ದಾನೆ ಎಂದು ನಾವು ಈಗ ನೋಡುತ್ತಿದ್ದೇವೆ. ಇಲ್ಲಿ ನಾನು ಹೇಳಿದಂತೆ ಫತೀಹ್ ಸಾಹಿಬ್‌ರ ಉದಾಹರಣೆಯೂ ಮುಂದೆ ಬಂದಿದೆ. ಅವರೆಲ್ಲರೂ ಹಝ್ರತ್ ಮಸೀಹ್ ಮೌಊದ್‌ರ ಮೇಲೆ ದುರೂದ್ ಮತ್ತು ಸಲಾಮಿನ ಪ್ರಾರ್ಥನೆಯನ್ನು ಸಹ ಮಾಡುತ್ತಾರೆ. ಪ್ರೀತಿ ಪ್ರೇಮವನ್ನು ಸಹ ವ್ಯಕ್ತಪಡಿಸುತ್ತಾರೆ. ಈ ಸಂಗತಿಗೆ ಸಾಕ್ಷ್ಯವಹಿಸುತ್ತಾ ಹಾತಿಂ ಸಾಹಿಬ್‌ರು ಬರೆಯುತ್ತಾರೆ: ಫತೀಹ್ ಸಾಹಿಬ್‌ರಿಗೆ ಹಝ್ರತ್ ಮಸೀಹ್ ಮೌಊದ್(ಅ), ಅವರ ಗ್ರಂಥಗಳು ಮತ್ತು ಅವರ ಪದ್ಯಗಳೊಂದಿಗೆ ಇದ್ದ ಪ್ರೇಮ ವಿವರಿಸಲು ಸಾಧ್ಯವಲ್ಲ.

ಖಿಲಾಫತಿನೊಂದಿಗೆ ದಿವಂಗತರಿಗೆ ಇದ್ದ ಪ್ರೀತಿ, ಅನುಸರಣೆ, ಗೌರವ ಅವರ ಪ್ರತಿಯೊಂದು ಮಾತು ಮತ್ತು ಕೃತಿಯಿಂದ ತುಳುಕುತ್ತಿತ್ತು ಮತ್ತು ಪ್ರತಿಯೊಬ್ಬರಿಗೂ ಅದು ಕಾಣಬಹುದಾಗಿತ್ತು. ಖಿಲಾಫತ್ ಅಲ್ಲಾಹನು ಮಹತ್ತಾದ ವರದಾನವಾಗಿದೆ ಎಂದು ಅವರಿಗೆ ದೃಢವಾದ ನಂಬಿಕೆಯಿತ್ತು. ಅವರು ಖಿಲಾಫತ್ ಎಂಬ ಅಲ್ಲಾಹನ ಹಗ್ಗವನ್ನು ಬಹಳ ಗಟ್ಟಿಯಾಗಿ ಹಿಡಿದಿದ್ದರು. ಖಿಲಾಫತಿನ ಅನುಸರಣೆಯಲ್ಲಿ ಅರ್ಪಿತರಾಗಿದ್ದರು. ಇದನ್ನು ನಾನು ಸಹ ನೋಡಿದ್ದೇನೆ. ಅಂತಹ ಪ್ರೀತಿ ಮತ್ತು ಪ್ರೇಮ ಅವರ ಕಣ್ಣುಗಳಲ್ಲಿ ಮತ್ತು ಪ್ರತಿಯೊಂದು ಚಲನೆಯಲ್ಲಿ ನನ್ನೊಂದಿಗೆ ಇರುವ ಭೇಟಿಯಲ್ಲಿ ಕಾಣಬಹುದಾಗಿತ್ತು ಮತ್ತು ತುಳುಕುತ್ತಿತ್ತು. ಅದು ಅಸಾಧಾರಣವಾದ ಮಟ್ಟದ್ದಾಗಿತ್ತು. ಅದರೊಂದಿಗೆ ಬಹಳ ಗೌರವಾದರ ಸಹ ಇತ್ತು. ಬಹಳ ಜ್ಞಾನಪರವಾದ ಮತ್ತು ಸಾಕ್ಷ್ಯಾಧಾರ ಹೊಂದಿರುವ ವಿಷಯಗಳನ್ನು ತರುತ್ತಿದ್ದರು. ಅದನ್ನು ನಾನು ರದ್ದು ಮಾಡಿದರೆ ಅಥವಾ ಸರಿಯಾಗಿ ಗೊತ್ತಾಗದ ಕಾರಣದಿಂದ ಹೆಚ್ಚಿನ ಸಂಶೋಧನೆ ನಡೆಸಲು ಹೇಳಿದರೆ, ತೆರೆದ ಮನಸ್ಸಿನೊಂದಿಗೆ ಅದನ್ನ ಸಮ್ಮತಿಸುತ್ತಿದ್ದರು. ಅವರು ಖಿಲಾಫತಿನ ಪ್ರೇಮಿ ಮತ್ತು ಸಮರ್ಥರಾದ ಸಹಾಯಿಯಾಗಿದ್ದರು.

ಉಸಾಮ ಅಬ್ದುಲ್ ಅಝೀಂ ಸಾಹಿಬ್‌ರು ಬರೆಯುತ್ತಾರೆ: ಫತೀಹ್ ಅಬ್ದುಸ್ಸಲಾಂ ಬಹಳ ದೊಡ್ಡ ಪಂಡಿತರಾಗಿದ್ದರು. ಹಿರಿ ವಯಸ್ಸಿನವರಾಗಿದ್ದರೂ ಬಹಳ ವಿನಯವಂತರಾಗಿದ್ದರು. ನಮ್ಮಲ್ಲಿ ಅತ್ಯಂತ ಕಿರಿಯ ವ್ಯಕ್ತಿಯೊಂದಿಗೂ ಬಹಳ ಗೌರವದಿಂದ ವರ್ತಿಸುತ್ತಿದ್ದರು. ಅವರ ಸಲಹೆಗಳನ್ನು ಸ್ವೀಕರಿಸುತ್ತಿದ್ದರು. ಬಹಳ ಧೈರ್ಯವಂತರಾಗಿದ್ದರು. ಯಾರೊಂದಿಗಾದರೂ ಏನಾದರೂ ಹೆಚ್ಚುಕಮ್ಮಿಯಾದರೆ, ಎಲ್ಲರ ಮುಂದೆ ಬಹಳ ವಿನಯದಿಂದ ಕ್ಷಮೆ ಕೇಳುತ್ತಿದ್ದರು ಮತ್ತು ಅವರ ಹಣೆಯನ್ನು ಚುಂಬಿಸುತ್ತಿದ್ದರು. ಅವರಿಗೆ ಇಸ್ಲಾಮಿನೊಂದಿಗೆ ಬಹಳ ಪ್ರೀತಿಯಿತ್ತು. ಅಹ್ಮದೀ ಯುವಕರನ್ನು ಅರಿವು ಮತ್ತು ಆಧ್ಯಾತ್ಮಿಕತೆ ಇರುವ ಸೈನಿಕ ಮತ್ತು ಸೇವಕರನ್ನಾಗಿ ಮಾಡಲು ಅವರು ಬಯಸುತ್ತಿದ್ದರು. ತಡರಾತ್ರಿ ತನಕ ನಮ್ಮನ್ನು ಉಪದೇಶಿಸುತ್ತಿದ್ದರು ಮತ್ತು ಜಮಾಅತಿನ ಜವಾಬ್ದಾರಿಗಳ ಕಡೆಗೆ ಗಮನ ಸೆಳೆಯುತ್ತಿದ್ದರು. ಬಹಳ ಸೌಮ್ಯ ಸ್ವಭಾವದವರಾಗಿದ್ದರು. ಅವರೊಂದಿಗೆ ಯಾರಾದರೂ ಜಂಭದಿಂದ ಮಾತನಾಡಿದರೂ ಅವರು ಅದಕ್ಕೆ ಕಠಿಣವಾಗಿ ಜವಾಬು ನೀಡುತ್ತಿರಲಿಲ್ಲ. ಅದು ನನಗೂ ಗೊತ್ತಿದೆ. ಕೆಲವು ಜನರು ಅವರಿಗೆ ಕಠಿಣವಾದ ತೊಂದರೆಗಳನ್ನು ತಲುಪಿಸಿದ್ದರು. ಆದರೆ ಫತೀಹ್ ಸಾಹಿಬ್‌ರು ಅದಕ್ಕೆ ಉತ್ತರವಾಗಿ ಎಂದಾದರೂ ಕಠಿಣವಾದ ಪದಗಳನ್ನು ಉಪಯೋಗಿಸಿದ್ದರೆ ಕೂಡ ಅನಂತರ ಕ್ಷಮೆ ಕೇಳುತ್ತಿದ್ದರು. ಕೆಲವೊಮ್ಮೆ ನನಗೂ ಸಹ ಬರೆಯುತ್ತಿದ್ದರು: ಇಂತಿಂತಹ ವ್ಯಕ್ತಿಯೊಂದಿಗೆ ನಾನು ಕಠಿಣವಾಗಿ ಮಾತನಾಡಿದ್ದೆ ಮತ್ತು ಅವರಿಂದ ಕ್ಷಮೆಯನ್ನು ಸಹ ಕೇಳಿದ್ದೇನೆ ಎಂದು. ಇಂತಹ ಗುಣ ಕೆಲವರಲ್ಲಿ ಮಾತ್ರವಿರುತ್ತದೆ.

ತಮೀಂ ಸಾಹಿಬ್ ಬರೆಯುತ್ತಾರೆ: ಇಸ್ಲಾಮಿನಲ್ಲಿ ಯಾವುದೇ ಕೆಲಸ ಖಿಲಾಫತ್ ಇಲ್ಲದೇ ಸರಿಯಾಗಲಿಕ್ಕಿಲ್ಲವೆಂದು ಅವರು ಹೆಚ್ಚಾಗಿ ಹೇಳುತ್ತಿದ್ದರು. ವಿವಿಧ ಚಿಂತನೆಗಳ ಬಗ್ಗೆ ವಾಲುವ ಆವಶ್ಯಕತೆಯಿಲ್ಲ. ನಮಗೆ ಖಲೀಫರ ಆವಶ್ಯಕತೆಯಿದೆ. ಅವರೇ ಭಿನ್ನಾಭಿಪ್ರಾಯಕ್ಕೆ ತೀರ್ಮಾನವನ್ನು ಕಲ್ಪಿಸುತ್ತಾರೆ. ದೈವಿಕ ಮಾರ್ಗದರ್ಶನದ ಮೂಲಕ ಖಲೀಫರು ನಮ್ಮ ಮಾರ್ಗದರ್ಶನ ಮಾಡುತ್ತಾರೆ. ಖಲೀಫತುಲ್ ಮಸೀಹ್‌ರು ಸ್ವೀಕರಿಸದ ಸಂಗತಿಯನ್ನು ಬಿಟ್ಟುಬಿಡಲು ಅವರು ಸದಾ ತಯಾರಾಗಿದ್ದರು. ಖಲೀಫತುಲ್ ಮಸೀಹರನ್ನು ಭೇಟಿಯಾಗಲು ಹೋಗುವಾಗ ಬಹಳ ಸಂತೋಷದಿಂದ ಇರುವುದಾಗಿ ಕಾಣಬಹುದಾಗಿತ್ತು. ಬಹಳ ಪ್ರೀತಿ ಮತ್ತು ಆವೇಶದಿಂದ ಭೇಟಿಯಾಗುತ್ತಿದ್ದರು ಮತ್ತು ಭೇಟಿಯಾಗುವಾಗ ನಡೆದ ಸಂಗತಿಗಳನ್ನು ಹೇಳುತ್ತಿದ್ದರು. ಫೆಲಸ್ತೀನಿನಿಂದ ಒಬ್ಬ ಮಹಿಳೆಯಾದ ಸಮಾ ಸಾಹಿಬ ಹೇಳುತ್ತಾರೆ: ನಾನು ಕನಸಿನಲ್ಲಿ ಹೀಗೆ ಕಂಡೆನು. ಅದು ಸತ್ಯವೆಂದು ತೋರುತ್ತಿತ್ತು. ನಾನು ಮತ್ತು ನನ್ನ ಸಹೋದರಿ ಸಹರಿ ಸಮಯದಲ್ಲಿ ಕುಳಿತುಕೊಂಡಿದ್ದೆವು. ಅವರು ನನ್ನೊಡನೆ ಹೇಳಿದರು: ಒಂದು ಸಭೆಯಲ್ಲಿ ದೇವದೂತರೊಬ್ಬರು ಅಹ್ಮದಿಯರನ್ನು ಆವರಿಸಿ ನಿಂತಿದ್ದರು. ಅಲ್ಲಿಗೆ ಫತೀಹ್ ಸಾಹಿಬ್‌ರು ಬಂದಾಗ, ದೇವದೂತ ಫತೀಹ್ ಸಾಹಿಬ್‌ರೊಡನೆ ಹೇಳಿದರು: ನೀವು ಚಮೇಲಿಯ ಅತ್ಯಂತ ಸುಂದರ ಪುಷ್ಪವಾಗಿರುವಿರಿ. ಆಗ ನಾನು ನನ್ನ ಸಹೋದರಿಯೊಡನೆ ಹೇಳಿದೆ: ಫತೀಹ್ ಸಾಹಿಬ್ ಎಷ್ಟು ಪರಿಶುದ್ಧ ವ್ಯಕ್ತಿಯಾಗಿರುವರು.

ಅರಬಿ ಡೆಸ್ಕಿನ ತಾಹಿರ್ ನದೀಂ ಸಾಹಿಬ್‌ರು ಬರೆಯುತ್ತಾರೆ: ಫತೀಹ್ ಸಾಹಿಬ್‌ರಲ್ಲಿ ಇದ್ದ ಒಂದು ಗುಣವೇನೆಂದರೆ, ಅವರು ಬಹಳ ದೊಡ್ಡ ಪಂಡಿತರಾಗಿದ್ದು ಕೂಡ ವಿನಯದ ಮೂರ್ತೀಭಾವವಾಗಿದ್ದರು. ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಎಷ್ಟು ಪ್ರೀತಿ ಮತ್ತು ಪ್ರೇಮವಿತ್ತು ಎಂದರೆ, ಬರಾಹೀನೆ ಅಹ್ಮದಿಯವನ್ನು ಅವರು ಎಷ್ಟು ಬಾರಿ ಓದಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಅದರ ಹೊಸ ಹೊಸ ಅರ್ಥಗಳನ್ನು ತೆಗೆದು ಮುಂದಿರಿಸುತ್ತಿದ್ದರು. ಅದರ ಮೇಲೆ ಅವರು ಅನೇಕ ಪ್ರೋಗ್ರಾಮುಗಳನ್ನು ಸಹ ರಿಕಾರ್ಡ್ ಮಾಡಿದ್ದರು. ಅವರು ಜಲ್ಸದ ಒಂದು ರೋನಕ್ ಆಗಿದ್ದರು. ಅದು ನಮಗೆಲ್ಲರಿಗೂ ಗೊತ್ತಿದೆ. ಬಹಳ ಉಚ್ಚ ಸ್ವರವನ್ನು ಹೊಂದಿದ್ದರು. ಜಲ್ಸದ ಕೊನೆಯ ದಿನ ಬಹಳ ಆವೇಶಭರಿತ ನಾರೆ ಹಾಕುತ್ತಿದ್ದರು. ಅವರ ನಾರೆಯಲ್ಲೂ ಒಂದು ಆವೇಶವಿತ್ತು. ಅದು ಹೃದಯದಿಂದ ಬರುತ್ತಿತ್ತು ಎಂದು ಗೊತ್ತಾಗುತ್ತಿತ್ತು. ಅಲ್ಲಾಹನು ಅವರ ಮಕ್ಕಳಿಗೂ ಅವರ ಹೆಜ್ಜೆಗುರುತುಗಳ ಮೇಲೆ ನಡೆಯಲು ಸೌಭಾಗ್ಯ ನೀಡಲಿ. ಅವರು ಪ್ರಾರ್ಥನೆಗಳ ಅವರ ಮಕ್ಕಳ ಪರವಾಗಿ ಅಲ್ಲಾಹನು ಸ್ವೀಕರಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಕೆನಡದ ಮಾಜಿ ಮುಬಲ್ಲಿಗ್ ಇಂಚಾರ್ಜ್ ಮತ್ತು ಸಿರಿಲಿಯೋನಿನ ಮಾಜಿ ಅಮೀರ್ ಮತ್ತು ಮಿಶನರಿ ಇಂಚಾರ್ಜ್ ಆದ ಖಲೀಲ್ ಮುಬಶ್ಶಿರ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ರಝಿಯ ಬೇಗಂ ಸಾಹಿಬ್‌ರದ್ದಾಗಿದೆ. ಅವರು ಕೆಲವು ದಿನಗಳಿಗೆ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಖಲೀಲ್ ಸಾಹಿಬ್‌ರು ಬರೆಯುತ್ತಾರೆ: ನನ್ನ ಪತ್ನಿಯಾದ ರಝಿಯ ಬೇಗಂ ತಬ್ಲೀಗ್ ಮೈದಾನದ ದೀರ್ಘವಾದ ಕಾಲದಲ್ಲಿ ತನ್ನ ವಖ್ಫೇ ಝಿಂದಗಿ ಪತಿಯೊಂದಿಗೆ ಸಹನೆ, ಆವೇಶ ಮತ್ತು ಉತ್ಸಾಹದಿಂದ ಸೇವೆಯ ಸೌಭಾಗ್ಯವನ್ನು ಪಡೆಯುತ್ತಾ ಇದ್ದರು. ಆಫ್ರಿಕದಲ್ಲಿ ವಿಶೇಷವಾಗಿ ಉತ್ತಮ ರೀತಿಯಲ್ಲಿ ಅತಿಥಿ ಸತ್ಕಾರ ಮಾಡುವ ಮತ್ತು ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಎಂದಿಗೂ ಅನಾವಶ್ಯಕವಾದ ಬೇಡಿಕೆಗಳನ್ನು ಇರಿಸಲಿಲ್ಲ. ಎಲ್ಲ ಸ್ಥಿತಿಯಲ್ಲೂ ಸಹನೆ ಮತ್ತು ಕೃತಜ್ಞತೆಯೊಂದಿಗೆ ವಖ್ಫೇ ಝಿಂದಗಿಯಾದ ಪತಿಯೊಂದಿಗೆ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ದಿವಂಗತರು ಆರಾಧನೆಯಲ್ಲಿ ಕಟ್ಟುನಿಟ್ಟಾಗಿದ್ದ, ಸದಖ ಮತ್ತು ಧನತ್ಯಾಗದಲ್ಲಿ ಮನಸ್ಸಾರೆ ಮತ್ತು ಆವೇಶದೊಂದಿಗೆ ಭಾಗಿಯಾಗುತ್ತಿದ್ದರು. ನಿಧನಕ್ಕೆ ಮುಂಚೆ ಎಲ್ಲ ಚಂದಾಗಳನ್ನು ಪೂರ್ತಿಯಾಗಿ ಪಾವತಿಸಿದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರ ಪತ್ನಿಯಾದ ಸುಲ್ತಾನ್ ಸಾಹಿಬರದ್ದಾಗಿದೆ. ಹೃದಯಾಘಾತದ ನಿಮಿತ್ತ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರಿಗೆ ಅಲ್ಲಾಹನ ಕೃಪೆಯಿಂದ ಪಾಕಿಸ್ತಾನದ ಲಜ್ನದಲ್ಲಿ ಅನೇಕ ವಿಭಾಗದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಲಭಿಸಿತ್ತು. ಖಿದ್‌ಮತೇ ಖಲ್‌ಖಿನ ವಿಭಾಗದಲ್ಲಿ ವಿಶೇಷವಾಗಿ ಮತ್ತು ಹೆಚ್ಚಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಅವರ ಪತಿಯಾದ ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರು ಬರೆಯುತ್ತಾರೆ: ಜಮಾಅತ್ ಮತ್ತು ಖಿಲಾಫತಿಗೆ ನಿಷ್ಠಾವಂತರಾಗಿದ್ದರು. ನಮ್ಮ ಮನೆ ಮಸ್ಜಿದ್ ಮುಬಾರಕಿಗೆ ಸಮೀಪವಿದೆ ಎಂಬ ಕಾರಣದಿಂದ ಬಹಳ ಸಂತೋಷಗೊಂಡಿದ್ದರು. ಅವರ ವಿವಾಹದ ವೇಳೆ ಅವರ ಸೊಸೆ ಮೃತಪಟ್ಟಿದ್ದರು. ಅವರ ಸುಸರ್ ದೋಸ್ತ್ ಮುಹಮ್ಮದ್ ಶಾಹಿದ್ ಸಾಹಿಬ್ ಜೀವಿಸಿದ್ದರು. ಸ್ವಂತ ಮಕ್ಕಳು ಸೇವೆ ಮಾಡುವ ರೀತಿಯಲ್ಲಿ ಅವರನ್ನು ಸೇವೆ ಮಾಡಿದರು. ಅವರ ಎಲ್ಲ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸಿದರು. ಅವರ ಬಳಿಗೆ ವಿವಿಧ ದೇಶಗಳಿಂದ ಬರುವ ಅತಿಥಿಗಳಿಗೆ ಉತ್ತಮ ರೀತಿಯಲ್ಲಿ ಸತ್ಕಾರ ಮಾಡುತ್ತಿದ್ದರು. ಒಬ್ಬ ವಖ್ಫೆ ಝಿಂದಗಿಯ ಬಹು ಎಂಬ ರೀತಿಯಲ್ಲಿ ಅದರ ಹಕ್ಕುಗಳನ್ನು ಈಡೇರಿಸಿದರು. ದರಿದ್ರರನ್ನು ಬಡವರನ್ನು ಸಹಾಯ ಮಾಡುತ್ತಿದ್ದರು. ಈ ವಿಷಯದಲ್ಲಿ ಅವರದ್ದು ತೆರೆದ ಕೈಯಾಗಿತ್ತು. ಕೆಲವೊಮ್ಮೆ ಸಾಲಗಾರರಾಗುತ್ತಿದ್ದರು. ಕೆಲವೊಮ್ಮೆ ತನ್ನ ಆಭರಣಗಳನ್ನು ಸಹ ಮಾರಾಟ ಮಾಡಿದರು. ಆದರೆ ದರಿದ್ರರನ್ನು ಎಲ್ಲ ರೀತಿಯಲ್ಲೂ ಸಹಾಯ ಮಾಡುತ್ತಿದ್ದರು. ಚಂದಾಗಳನ್ನು ಸರಿಯಾಗಿ ಪಾವತಿ ಮಾಡುತ್ತಿದ್ದರು. ವಸಿಯ್ಯತ್ ಮಾಡಿದ್ದರು. ಕೆಲವೊಮ್ಮೆ ಆಭರಣಗಳನ್ನು ಮಾರಾಟ ಮಾಡಿಯೂ ಚಂದಗಳನ್ನು ಪಾವತಿಸಿದರು. ಚಂದಾದ ಕೆಲವು ಯೋಜನೆಗಳಿಗೆ ಆಭರಣವನ್ನು ಸಹ ನೀಡಿದರು. ತನ್ನ ಕಡೆಯಿಂದ ಮಾತ್ರವಲ್ಲ, ಅವರ ತಂದೆತಾಯಂದಿರ ಹೆಸರಲ್ಲೂ ಖಂಡಿತ ಚಂದಾ ನೀಡುತ್ತಿದ್ದರು. ಬಹಳ ಸ್ವಚ್ಛತೆಯನ್ನು ಇಷ್ಟಪಡುವವರಾಗಿದ್ದರು. ನಮಾಝ್ ಮತ್ತು ಉಪವಾಸವನ್ನು ಪಾಲಿಸುವವರಾಗಿದ್ದರು. ತಹಜ್ಜುದ್ ನಿರ್ವಹಿಸುವವರಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ. ಅವರಿಗೆ ಇಬ್ಬರು ಪುತ್ರರಿದ್ದಾರೆ. ಅವರಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು

ಸೌಭಾಗ್ಯ ನೀಡಲಿ. ಅವರ ಮಕ್ಕಳಿಗೂ ಪತಿಯಾದ ಡಾಕ್ಟರ್ ಸಾಹಿಬ್‌ರಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಜನಾಝಃ ಸೀರಿಯದ ಸನ್ಮಾನ್ಯ ಗಸ್‌ವಾನ್ ಅಲ್‌ಮಾಝ್‌ಝ್‌ವಾನಿ ಸಾಹಿಬರದ್ದಾಗಿದೆ. ತುರ್ಕಿಯಲ್ಲಿದ್ದರು. ಅವರು ಕೆಲವು ದಿನಗಳಿಗೆ ಮುಂಚೆ 49ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದೀರ್ಘಕಾಲದಿಂದ ರೋಗಿಯಾಗಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ತುರ್ಕಿಯ ಜಮಾಅತ್ ಸದರ್ ಮತ್ತು ಮುರಬ್ಬಿಯಾಗಿರುವ ಸಾದಿಖ್ ಬಟ್ ಸಾಹಿಬ್‌ರು ಬರೆಯುತ್ತಾರೆ: 2015ರಲ್ಲಿ ಸೀರಿಯದಿಂದ ವಲಸೆ ಮಾಡಿ ತುರ್ಕಿಗೆ ಬಂದಿದ್ದರು. 2016ರಲ್ಲಿ ಅವರು ಇಸ್ಕದರೂನಿನ ಲಜ್ನ ಸದರ್ ಆಗಿ ನೇಮಿಸಲ್ಪಟ್ಟರು. ನಿಧನದ ತನಕ ಲಜ್ನ ಸದರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ದೀರ್ಘ ಕಾಲದಿಂದ ರೋಗಿಯಾಗಿದ್ದರು. ಹಾಸಿಗೆಯಲ್ಲೇ ಇದ್ದರು. ಆದಾಗ್ಯೂ ರೋಗಾವಸ್ಥೆಯಲ್ಲೂ ಧಾರ್ಮಿಕ ಸೇವೆಯಲ್ಲಿ ನಿರತರಾಗಿದ್ದರು. ಇಂಟರ್‌ನೆಟ್ ಮೂಲಕ ವಿವಿಧ ರೀತಿಯಲ್ಲಿ ತಬ್ಲೀಗ್ ಮಾಡುತ್ತಿದ್ದರು. ಅದೇ ರೀತಿಯಲ್ಲಿ ಸಿರಿಯನ್ ಅಹ್ಮದೀ ಮಹಿಳೆಯರ ಶಿಕ್ಷಣ ಮತ್ತು ತರಬೇತಿಯಲ್ಲಿ ಮುಖ್ಯವಾದ ಪಾತ್ರ ವಹಿಸುತ್ತಿದ್ದರು. ಬಹಳ ಸ್ನೇಹಮಯಿಯಾಗಿದ್ದರು. ಎಲ್ಲರೊಂದಿಗೆ ಸಹಾನುಭೂತಿ ಹೊಂದಿದ್ದ ಮತ್ತು ಎಲ್ಲರ ಒಳಿತನ್ನು ಬಯಸುವವರಾಗಿದ್ದರು. ಮಹಿಳೆಯರಲ್ಲಿ ಕೆಲವರು ನನಗೆ ಇವರ ಕುರಿತು ಬರೆದಿರುವರು. ಅವರು ಇವರನ್ನು ಬಹಳವಾಗಿ ಹೊಗಳಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ನಾನು ಹೇಳಿದಂತೆ ಜುಮಾ ನಮಾಝಿನ ನಂತರ ಇವರೆಲ್ಲರ ಜನಾಝಃ ಗಾಇಬ್ ನಮಾಝನ್ನು ನಿರ್ವಹಿಸುವೆನು.

********

*(ಪುಟ ಸಂಖ್ಯೆ 02ರ ಉಳಿದ ಭಾಗ)*

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಂದ ಮುಬಾಹಲಕ್ಕಾಗಿ ಸಾಮಾನ್ಯ ಜಾಹೀರಾತು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮೌಲ್ವಿ ಮುಹಮ್ಮದ್ ಇಸ್ಮಾಯಿಲ್ ಅವರನ್ನು ಏಕೆ ಮುಬಾಹಲಕ್ಕಾಗಿ ಆಹ್ವಾನಿಸಿದ್ದಾರೆ ಎಂದು ಅವರು ವಿವರಿಸಿದರು. ಇದು ವಾಸ್ತವವಾಗಿ ಭಾಗಶಃ ಭಿನ್ನಾಭಿಪ್ರಾಯವಲ್ಲ, ಬದಲಾಗಿ ಮೂಲಭೂತ ಭಿನ್ನಾಭಿಪ್ರಾಯವಾಗಿತ್ತು. ಇದರ ನಂತರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನ ಅನುಮತಿಯೊಂದಿಗೆ ಮಾಬಹಲಾದ ಸಾಮಾನ್ಯ ಜಾಹೀರಾತನ್ನು ಪ್ರಕಟಿಸಿದರು. ಅದನ್ನು ಕೆಳಗೆ ಉಲ್ಲೇಖಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು:

ಈ ಅಸಹಾಯಕ ವ್ಯಕ್ತಿಯನ್ನು ಭಾಗಶಃ ಭಿನ್ನಾಭಿಪ್ರಾಯಗಳಿಂದ ಅಥವಾ ತಮ್ಮದೇ ತಪ್ಪುಗ್ರಹಿಕೆಯಿಂದಾಗಿ ಅವಿಶ್ವಾಸಿ ಎಂದು ಪರಿಗಣಿಸುವ ಎಲ್ಲಾ ಮೌಲ್ವಿಗಳು ಮತ್ತು ಮುಫ್ತಿಗಳ ಸಮ್ಮುಖದಲ್ಲಿ, ಈಗ ನಾನು ಸರ್ವಶಕ್ತನಾದ ಅಲ್ಲಾಹನಿಂದ ನಿಮ್ಮನ್ನು ಮುಬಾಹಲ ಮಾಡಲು ಕೇಳಲು ಒಪ್ಪಿಸಿದ್ದಾರೆ ಎಂದು ಹೇಳಲಾಗುತ್ತದೆ. ಮೊದಲು ನಾನು ಚರ್ಚೆಯಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸ್‌ನಿಂದ ನನ್ನ ನಂಬಿಕೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ತದನಂತರ ನೀವು ಅದನ್ನು ನಿರಾಕರಿಸಿದರೆ ನಾನು ಅದೇ ಚರ್ಚೆಯ ಮೈದಾನದಲ್ಲಿ ಮುಬಾಹಲ ಮಾಡುವೆನು. ಆದರಲ್ಲಿ ಮೊದಲಿಗರು ಮಿಯಾಂ ನಝೀರ್ ಹುಸೇನ್ ದೆಹಲ್ವಿ ಆಗಿದ್ದಾರೆ. ಅವರು ನಿರಾಕರಿಸಿದರೆ ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿ ಆಗಿರುವರು. ಅವರು ಸಹ ನಿರಾಕರಿಸಿದರೆ, ತದನಂತರ ನನ್ನನ್ನು ನಿರಾಕರಿಸಿದ ಮತ್ತು ನನ್ನನ್ನು ಕಾಫಿರ್ ಎಂದು ಪರಿಗಣಿಸಿದ, ಮುಸ್ಲಿಮರಲ್ಲಿ ನಾಯಕನೆಂದು ಪರಿಗಣಿಸಿದ ಎಲ್ಲಾ ಮೌಲ್ವಿಗಳನ್ನು. ನಾನು ಇಂದಿನಿಂದ ಅಂದರೆ 10–12–1892 ಆಗಿದೆ. ನಾಲ್ಕು ತಿಂಗಳವರೆಗೆ ಕಾಲಾವಕಾಶ ನೀಡುತ್ತೇನೆ. ಅವರು ಈ ನಾಲ್ಕು ತಿಂಗಳವರೆಗೆ ನನ್ನೊಂದಿಗೆ ಶರತ್ತುಬದ್ಧವಾಗಿ ಮುಬಾಹಲ ಮಾಡದಿದ್ದರೆ ಮತ್ತು ಕಾಫಿರ್ ಎಂದು ಹೇಳುವುದನ್ನು ನಿಲ್ಲಿಸದಿದ್ದರೆ ಅಲ್ಲಾಹನ ವಾಗ್ದಾನವೂ ಅವರ ವಿರುದ್ಧ ಪೂರ್ಣವಾಗುವುದು. (ಅದೇ ಪುಟ 363)

## ನಾನು ಅಬ್ದುಲ್ ಹಖ್ ಮತ್ತು ಅದೇ ರೀತಿ ತಮ್ಮನ್ನು ತಾವು ವಿದ್ವಾಂಸ ಅಥವಾ ಮೌಲವಿ ಎಂದೆನಿಸಿಕೊಳ್ಳುವ ಪ್ರತಿಯೊಬ್ಬ ಅವಿಶ್ವಾಸಿಗಳೊಂದಿಗೆ ಮುಬಾಹಲ ಮಾಡಲು ಸಿದ್ಧನಾಗಿದ್ದೇನೆ

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು: ಅಮೃತಸರದಲ್ಲಿ ವಾಸಿಸುತ್ತಿರುವ ಗಜ್ನವಿ ಸಾಹಿಬ್‌ಗಳಲ್ಲಿ ಒಬ್ಬನಾದ ಅಬ್ದುಲ್ ಹಖ್ ಎಂಬ ಸಾಹೇಬನೊರ್ವನಿಗೆ, ಈ ಅಸಹಾಯಕ ವ್ಯಕ್ತಿಗೆ ಮುಬಾಹಲಕ್ಕಾಗಿ ಜಾಹೀರಾತು ನೀಡಿ ಸ್ವಲ್ಪ ಸಮಯವಾಗಿದೆ ಎಂದು ಓದುಗರಿಗೆ ತಿಳಿದಿರಬಹುದು. ಆದರೆ ಆ ಸಮಯದಲ್ಲಿ ಈ ಜನರನ್ನು ಕಲಿಮಾ ಉಚ್ಚರಿಸುವರು ಮತ್ತು ಅಹ್ಲ್–ಇ–ಕಿಬ್ಲಾ ಎಂದು ಭಾವಿಸಲಾಗಿತ್ತು, ಅವರನ್ನು ಶಪಿಸುವುದು ಸ್ವೀಕಾರಾರ್ಹವಲ್ಲ, ಆದ್ದರಿಂದ ಅವರು ಕಾಫಿರ್ ಎಂದು ಒತ್ತಾಯಿಸುವವರೆಗೂ ಅವರ ಈ ವಿನಂತಿಯನ್ನು ಸ್ವೀಕರಿಸಲು ಹಿಂಜರಿಯುತ್ತಿದ್ದೆನು. ತಕ್ಫೀರ್ ನ ಫತ್ವಾವನ್ನು ಸಿದ್ಧಪಡಿಸಿದ ನಂತರ, ಈ ಕಡೆಯಿಂದ ಸಹ ಮುಬಾಹಲಕ್ಕೆ ಜಾಹೀರಾತು ನೀಡಲಾಯಿತು. ಅದನ್ನು ಆಯಿನಾತೆ ಕಮಾಲಾತ್–ಇ–ಇಸ್ಲಾಂ ಪುಸ್ತಕದಲ್ಲಿ ಸೇರಿಸಲಾಗಿದೆ. ಮತ್ತು ಇಲ್ಲಿಯವರೆಗೆ ಯಾರೂ ಮುಬಾಹಲಕ್ಕಾಗಿ ಮುಂದೆ ಬರಲಿಲ್ಲ. (ಅದೇ ಪುಟ 418)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅಬ್ದುಲ್ ಹಕ್ ಘಜ್ನವಿ ಪ್ರಕಟಿಸಿದ ಮುಬಾಹಲದ ಜಾಹೀರಾತು 26 ಶವ್ವಾಲ್ 1310 ಹಿಜರಿ ನನ್ನ ಕಣ್ಣುಗಳ ಮೂಲಕ ಹಾದುಹೋಯಿತು. ಆದ್ದರಿಂದ, ಈ ಜಾಹೀರಾತನ್ನು ನಾನು ಈ ವ್ಯಕ್ತಿಯೊಂದಿಗೆ ಮತ್ತು ವಿದ್ವಾಂಸ ಅಥವಾ ಮೌಲ್ವಿ ಎಂದು ಕರೆಯಲ್ಪಡುವ ಪ್ರತಿಯೊಬ್ಬ ಅವಿಶ್ವಾಸಿಯೊಂದಿಗೆ ಮುಬಾಹಲವನ್ನು ಒಪ್ಪಿದ್ದೇನೆ ಮತ್ತು ಇನ್ಶಾಅಲ್ಲಾಹ್, ನಾನು ಅಮೃತಸರವನ್ನು ಮೂರನೆಯ ಅಥವಾ ನಾಲ್ಕನೇ ಝಿಲ್‌ಖದಾ 1310 ಹಿಜರಿಗೆ ತಲುಪುತ್ತೇನೆ ಎಂದು ನಾನು ಭಾವಿಸುತ್ತೇನೆ. ಮತ್ತು ಮುಬಾಹಲವನ್ನು 10 ಝಿಲ್‌ಖದ್ ಅಥವಾ ಅಂದು ಮಳೆಯ ಸಂದರ್ಭ ಏನಾದರು ಉಂಟಾದಲ್ಲಿ 11ನೇ ಝಿಲ್‌ಖದ್ 1310 ಹಿಜರಿ ಎಂದು ಘೋಷಿಸಲಾಗಿದೆ. ಕೆಲವು ಅಗತ್ಯ ಕಾರಣಗಳಿಲ್ಲದೆ ಇದನ್ನು ಯಾವುದೇ ಸಂದರ್ಭದಲ್ಲಿ ಉಲ್ಲಂಘಿಸಲಾಗುವುದಿಲ್ಲ. ಮತ್ತು ಮುಬಾಹಲಕ್ಕಾಗಿ ಮಸೀದಿ ಖಾನ್ ಬಹದ್ದೂರ್ ಮುಹಮ್ಮದ್ ಶಾ ಬಳಿ ಇರುವ ಈದ್ ಗಾಹ್ ಸ್ಥಳವನ್ನು ಇದಕ್ಕಾಗಿ ಘೋಷಿಸಲಾಗಿದೆ. ಮತ್ತು ದಿನದ ಮೊದಲ ಭಾಗದಲ್ಲಿ ಸುಮಾರು ಹನ್ನೆರಡು ಗಂಟೆಯವರೆಗೆ ಇಸ್ಲಾಮ್ ಧರ್ಮದ ಸತ್ಯದ ಬಗ್ಗೆ ಕ್ರೈಸ್ತರೊಂದಿಗೆ ಚರ್ಚೆ ನಡೆಯಲಿದೆ. ಈ ಚರ್ಚೆಯು ಹನ್ನೆರಡು ದಿನಗಳ ಕಾಲ ಮುಂದುವರಿಯುವುದು. ನನ್ನನ್ನು ಕಾಫಿರ್ ಎಂದು ಕರೆಯುವ ಮೂಲಕ ನನ್ನೊಂದಿಗೆ ವಾದಿಸಲು ಬಯಸುವವರು, ನನಗೆ ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆಯವರೆಗೆ ಸಮಯವಿರುತ್ತದೆ. ಆ ಸಮಯದಲ್ಲಿ, ಝಿಲ್‌ಖದ್ ಹತ್ತನೇ ದಿನ, ಅಥವಾ ಕಾರಣಾಂತರದಿಂದ ತಪ್ಪಿದರೆ ಝೀಲ್‌ಖದ್ 11ನೇ ದಿನ, 1310 ಹಿಜರಿಗೆ, ನನ್ನೊಂದಿಗೆ ಮುಬಾಹಲ ಮಾಡಿರಿ ಮತ್ತು ಇದಕ್ಕೆ 10ನೇ ಝಿಲ್‌ಖದ್ ದಿನಾಂಕವನ್ನು ಘೋಷಿಸಲಾಗಿದೆ. ಹೀಗೆ ನನ್ನನ್ನು ಕಾಫಿರ್ ಎಂದು ಹೇಳುವ ವಿದ್ವಾಂಸರು ಈ ಮುಬಾಹಲದಲ್ಲಿ ಭಾಗವಹಿಸಬಹುದು.

## ಮುಬಾಹಲಕ್ಕೆ ಹೆಸರು ಕರೆದು ಆಹ್ವಾನಿಸಲಾಯಿತು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಮುಬಹಲಾ ಹೆಸರಿನಲ್ಲಿ ವಿದ್ವಾಂಸರನ್ನು ಆಹ್ವಾನಿಸಿದರು. ಅವರು ಈ ಕೆಳಗಿನ ವಿದ್ವಾಂಸರನ್ನು ಮುಬಾಹಲಕ್ಕಾಗಿ ಹೆಸರಿನಿಂದ ಕರೆದರು: (1) ಮೊಹಿ–ಉದ್–ದಿನ್ ಲಖೋಖಾವಾಲೆ (2) ಮೌಲ್ವಿ ಅಬ್ದುಲ್ ಜಬ್ಬಾರ್ ಸಾಹಿಬ್ (3) ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿ (4) ಮುನ್ಷಿ ಸಾದುಲ್ಲಾ ಮದ್ರಾಸ್ ಹೈಸ್ಕೂಲ್ ಲಧನ (5) ಅಬ್ದುಲ್ ಅಝೀಝ್ ವಾಇಝ್ ಲಧನ (6) ಮುನ್ಷಿ ಮಹಮ್ಮದ್ ಉಮರ್ ಮಾಜಿ ಉದ್ಯೋಗಿ ಲುಧಿಯಾನ (7) ಮೌಲ್ವಿ ಮುಹಮ್ಮದ್ ಹಸನ್ ಸಾಹಿಬ್ ರಯೀಸ್ ಲಧನ (8) ಮಿಯಾನ್ ನಝೀರ್ ಹುಸೇನ್ ಸಾಹಿಬ್ ದೆಹಲ್ವಿ (9) ಪೀರ್ ಹೈದರ್ ಷಾ ಸಾಹಿಬ್ (10) ಹಾಫಿಝ್ ಅಬ್ದುಲ್ ಮನ್ನಾನ್ ವಾಝೀರಾಬಾದ್ (11) ಮಿಯಾನ್ ಅಬ್ದುಲ್ಲಾ ಟೋಂಕಿ (12) ಮೌಲ್ವಿ ಗುಲಾಮ್ ದಸ್ತಗೀರ್ ಕಸೂರಿ (13) ಮೌಲ್ವಿ ಶಾ ದಿನ್ ಸಾಹಿಬ್ (14) ಮೌಲ್ವಿ ಮುಷ್ತಾಕ್ ಅಹ್ಮದ್ ಸಾಹಿಬ್ ಮದ್ರಾಸ್ ಹೈಸ್ಕೂಲ್ ಲುಧಾನ್ವಿ (15) ಮೌಲ್ವಿ ರಶೀದ್ ಅಹ್ಮದ್ ಗಂಗೋಹಿ (16) ಮೌಲ್ವಿ ಮುಹಮ್ಮದ್ ಅಲಿ ಬೋಧಕ ಬೋಪ್ರಾನ್ ಜಿಲ್ಲೆ ಗುಜ್ರಾನ್ ವಾಲಾ (17) ಮೌಲ್ವಿ ಮುಹಮ್ಮದ್ ಇಸ್ಹಾಕ್ (18) ಸುಲೈಮಾನ್ ನಿವಾಸಿ ಪಟಿಯಾಲ ರಾಜ್ಯ (19) ಝುಹೂರುಲ್ ಹಸನ್ ಸಜ್ಜದ ನಶೀನ್ ಬಟಾಲ (20) ಮೌಲ್ವಿ ಮುಹಮ್ಮದ್ ಉದ್ಯೋಗಿ ಕರಂ ಬಕ್ಷ್ ಲಾಹೋರ್ ಇತ್ಯಾದಿ.

## ಮುಹಮ್ಮದ್ ಹುಸೇನ್ ಬಟಾಲ್ವಿ ಅವರಿಗೆ ಮುಬಾಹಲಕ್ಕೆ ಆಹ್ವಾನ, ಏಕೆಂದರೆ ಅವರು ಮುಬಾಹಲಕ್ಕೆ ವಿನಂತಿಸಿದ್ದರು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಈ ಜನರು ನಮ್ಮ ನೊಂದಾಯಿತ ಜಾಹಿರಾತುಗಳನ್ನು ಪಡೆದು ಮುಬಾಹಲಕ್ಕಾಗಿ ಬರದಿದ್ದರೆ ಇದು ಅವರು ಸ್ವತಃ ಸುಳ್ಳುಗಾರರು, ದಬ್ಬಾಳಿಕೆಗಾರರು ಮತ್ತು ಕಾಫಿರ್‌ಗಳು ಎಂದೆನಿಸಿಕೊಳ್ಳುವುದಕ್ಕೆ ಪ್ರಬಲ ಸಾಕ್ಷಿಯಾಗಿದೆ. ವಿಷೇಶವಾಗಿ ಶೇಖ್ ಮುಹಮ್ಮದ್ ಹುಸೇನ್ ಇಶಾಅತುಸ್ಸನ

ಅವರು ಕಡ್ಡಾಯವಾಗಿ ಮುಬಾಹಲದ ಮೈದಾನಕ್ಕೆ ನಿಶ್ಚಿತವಾದ ದಿನದಂದು ಅಮೃತ್ಸರಕ್ಕೆ ಅಗಮಿಸಬೇಕು. ಏಕೆಂದರೆ ಇವರು ಸ್ವತಃ ಮುಬಾಹಲಕ್ಕೆ ವಿನಂತಿಸಿದ್ದರು. ನೆನಪಿಡಿರೀ!! ನಾವು ಪದೇ ಪದೇ ಮುಬಾಹಲಕ್ಕೆ ಒತ್ತಾಯಿಸುತ್ತಿಲ್ಲ. ಏಕೆಂದರೆ ಮುಬಾಹಲ ಎಂಬುದು ತಮಾಷೆಯ ಮಾತಲ್ಲ. ಹೀಗಾಗಿ ನಿರ್ಧಾರವನ್ನು ಕೈಗೊಳ್ಳಬೇಕು, ಆದ್ದರಿಂದ ನಮ್ಮ ಜಾಹೀರಾತಿನ ಪ್ರಕಟಣೆಯನ್ನು ತಪ್ಪಿಸುವ ಮತ್ತು ನಿಗದಿತ ದಿನಾಂಕದಂದು ಕಾಣಿಸದ ವ್ಯಕ್ತಿಗೆ ಭವಿಷ್ಯದಲ್ಲಿ ಮತ್ತೆ ಮುಬಾಹಲವನ್ನು ಕೇಳುವ ಹಕ್ಕಿಲ್ಲ ಅವನು ಅವಮಾನ ಬಿಡುವವವಾಗುತ್ತಾನೆ. ಗೈರುಹಾಜರಾದವನು ಹೇಳುತ್ತಾ ಇರಲಿ. ಆದಾಗ್ಯೂ, ಈ ಜಾಹೀರಾತುಗಳನ್ನು, ಮುಬಾಹಲವನ್ನು ಪೂರ್ಣಗೊಳಿಸುವಿಕೆಗಾಗಿ ನೋಂದಾಯಿಸುವ ಮೂಲಕ ಕಳುಹಿಸಲಾಗುತ್ತದೆ, ಇದರಿಂದ ಅಪನಂಬಿಕೆದಾರರು ಯಾವುದೇ ಕ್ಷಮೆಯನ್ನು ಹೊಂದಿರುವುದಿಲ್ಲ. ಅಂತಿಮವಾಗಿ, ಮುಬಾಹಲದ ಮೊದಲು, ಕಾಫಿರ್‌ಗಳ ಮುಂದೆ ಇಸ್ಲಾಮ್ ಧರ್ಮದ ಕಾರಣಗಳನ್ನು ಸಾರ್ವಜನಿಕವಾಗಿ ಮಂಡಿಸುವ ಹಕ್ಕು ನಮಗಿದೆ ಎಂಬುದನ್ನು ನೆನಪಿಡಿ. **ವಸ್ಸಲಾಮು ಅಲಾ ಮನಿತ್ತಬಲ್‌ಹುದಾ** (ಮಾರ್ಗದರ್ಶನವನ್ನು ಅನುಸರಿಸುವವನಿಗೆ ಶಾಂತಿ ಸಿಗಲಿ.)

ಇದರ ನಂತರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು "ಸಂಪೂರ್ಣ ವಾದ" ಎಂಬ ಶೀರ್ಷಿಕೆಯಡಿಯಲ್ಲಿ ಬರೆದರು: ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿ ಅವರು ಝಿಲ್‌ಖಾದ 1310 ರ 10 ನೇ ದಿನಾಂಕದಂದು ಮುಬಾಹಲಕೆ ಹಾಜರಾಗದೇ ಇದ್ದಲ್ಲಿ, ಆ ದಿನದಿಂದ ಆತನನ್ನು ಕಾಫಿರ್ ಎಂದು ಕರೆಯುವ ಮೂಲಕ ಪಶ್ಚಾತ್ತಾಪ ಪಡುತ್ತಾರೆ ಎಂದು ಭವಿಷ್ಯವಾಣಿಯನ್ನು ನುಡಿಯಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಅಂತಿಮವಾಗಿ, ಓ ಸರ್ವಶಕ್ತ ಅಲ್ಲಹನೇ!! ಈ ನಿರಂಕುಶಾಧಿಕಾರಿ ಮತ್ತು ಬಂಡಾಯಗಾರ ಮತ್ತು ದೇಶದ್ರೋಹವನ್ನು ಶಪಿಸಲಿ ಮತ್ತು ಈ ಮುಬಾಹಲಕ್ಕಾಗಿ ನನ್ನ ವಿರುದ್ಧ ಇನ್ನು ಬರುವುದಿಲ್ಲ ಮತ್ತು ನಗರ, ಸ್ಥಳ ಮತ್ತು ಸಮಯದ ನೇಮಕಾತಿಯ ನಂತರ ಆತನನ್ನು ಅವಮಾನಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಆತ ಕಾಫಿರ್ ಮತ್ತು ಆತನ ಎಲ್ಲಾ ಇತರ ವಿಷಯಗಳಿಂದ ದೂರವಿರಿ. ಆಮೀನ್ (ಅದೇ ಪುಟ–447) (ಸಚ್ಚಾಯಿ ಕಾ ಇಝ್‌ಹಾರ್, ರೂಹಾನಿ ಖಝಾಈನ್, ಸಂಪುಟ–6, ಪುಟ–81)

**27 ಮೇ 1893ರಲ್ಲಿ, ಮುಬಾಹಲವನ್ನು ಅಮೃತಸರದ ಈದ್ ಗಾಹ್‌ದಲ್ಲಿ ನಡೆಸಲಾಗುವುದು ಎಂದು ಘೋಷಿಸಲಾಯಿತು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ಕೆಳಗಿನ ಜಾಹಿರಾತನ್ನು ಝಿಲ್‌ಖಾದ 9ನೇ ದಿನ (ಮೇ 26, 1893) ಮುಬಾಹಲ ಘೋಷಣೆಗೆ ಒಂದು ದಿನ ಮುಂಚಿತವಾಗಿ ಝಿಲ್‌ಖಾದ 1310 ಹಿಜರಿನ 10ನೇ ತಾರೀಖಿನಂದು ಒಂದು ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಿದರು:

ಇಸ್ಲಾಮ್ ಧರ್ಮದ ಸಹೋದರರೇ!! ಶನಿವಾರದ ಝಿಲ್‌ಖಾದ್ ಹತ್ತನೇ ದಿನ, ಮಿಯಾಂ ಅಬ್ದುಲ್ ಹಖ್ ಘಜ್ನವಿ ಮತ್ತು ಇತರ ಕೆಲವು ವಿದ್ವಾಂಸರು, ಅವರು ಭರವಸೆ ನೀಡಿದಂತೆ, ಈ ಅಸಹಾಯಕ ವ್ಯಕ್ತಿಯೊಂದಿಗೆ ಅವರು ಈ ಅಸಹಾಯಕ ವ್ಯಕ್ತಿಯನ್ನು ಕಾಫಿರ್, ದಜ್ಜಾಲ್, ನಾಸ್ತಿಕ, ಅಲ್ಲಾಹನ ವೈರಿ ಮತ್ತು ಪ್ರವದಿ(ಸ)ರವರ ವೈರಿ ಎಂದು ಪರಿಗಣಿಸುತ್ತಾರೆ ಮತ್ತು ನನ್ನ ಎಲ್ಲಾ ಪುಸ್ತಕಗಳನ್ನು ಕಾಫಿರ್‌ನ ಸಂಗ್ರಹ ಎಂದು ಕರೆದು ನನ್ನೊಂದಿಗೆ ಮುಬಾಹಲ (ಪ್ರಾರ್ಥನ ಸಮರ) ಮಾಡುತ್ತಾರೆ. ಆದರೆ ನಾನು ಮುಸ್ಲಿಮನಾಗಿದ್ದೇನೆ ಎಂದು ನಂಬಿಕೆ ನನಗೆ ಇದೆ. ಆದ್ದರಿಂದ ನಾನು ಮುಬಾಹಲಕ್ಕೆ ಪ್ರಾರ್ಥಿಸುವಾಗ ಕೆಲವು ಇತರ ಮುಸ್ಲಿಮರು ಇರಬೇಕೆಂದು ಬಯಸುತ್ತೇನೆ ಏಕೆಂದರೆ ನನ್ನ ಬರಹಗಳಿಗೆ ಸಂಬಂಧಿಸಿದಂತೆ, ಅವುಗಳಲ್ಲಿ ಯಾವುದೂ ಅಲ್ಲಾಹನ ಮತ್ತು ಪ್ರವಾದಿ(ಸ)ರ ಹೊರತು ಪಡಿಸಿ ಯಾವುದೇ ಅನ್ಯ ಮಾತುಗಳಿಲ್ಲ. ನಾನು ಕಾಫಿರ್ ಅಲ್ಲ ಮತ್ತು ಒಂದುವೇಳೆ ನನ್ನ ಪುಸ್ತಕಗಳು ಅಲ್ಲಾಹನ ಮತ್ತು ಪ್ರವಾದಿ(ಸ)ರ ಮಾತುಗಳಿಗೆ ವಿರುದ್ಧವಾಗಿದ್ದರೆ ಮತ್ತು ಅಪನಂಬಿಕೆಯಿಂದ ತುಂಬಿದ್ದರೆ, ಅಲ್ಲಾಹನು ಈ ಪ್ರಪಂಚದ ಆರಂಭದಿಂದಲೂ ಯಾವುದೇ ಅಪನಂಬಿಕೆದಾರನಿಗೆ ನೀಡದ ಶಾಪ ಮತ್ತು ಶಿಕ್ಷೆಯನ್ನು ನನ್ನ ಮೇಲೆ ಕಳುಹಿಸಲಿ ಎಂದು ಪ್ರಾರ್ಥಿಸುತ್ತೇನೆ. ಅದಕ್ಕೆ ನೀವೆಲ್ಲರು ಅಮೀನ್ ಎಂದು ಹೇಳಿರಿ ಏಕೆಂದರೆ ಒಂದು ವೇಳೆ ನಾನು ಕಾಫಿರ್ ಆಗಿದ್ದರೆ ನೌಝುಬಿಲ್ಲಾಹ್ ಇಸ್ಲಾಮ್‌ದಿಂದ ಧರ್ಮಭ್ರಷ್ಟನಾಗಿದ್ದಲ್ಲಿ ನನಗೆ ಅತ್ಯಂತ ಕೆಟ್ಟ ಹಿಂಸೆಯಿಂದ ಸಾಯುವುದು ಉತ್ತಮ ಮತ್ತು ಅಂತಹ ಜೀವನದ ಬಗ್ಗೆ ನನಗೆ ಅಸಹ್ಯವಿದೆ, ಇಲ್ಲದಿದ್ದರೆ, ಸರ್ವಶಕ್ತನಾದ ಅಲ್ಲಾಹನು ಅವನ ಪರವಾಗಿ ಸರಿಯಾದ ನಿರ್ಧಾರ ತೆಗೆದುಕೊಳ್ಳುತ್ತಾನೆ. ಅವನು ನನ್ನ ಮನಸ್ಸು ಹಾಗೂ ನನ್ನ ವಿರೋಧಿಗಳ ಮನಸ್ಸನ್ನು ನೋಡುತ್ತಿದ್ದಾನೆ. ನೀವೆಲ್ಲರು ನಾಳೆ 10 ಝಿಲ್‌ಖಾದ ದ ದಿವಸ ಮಧ್ಯಾಹ್ನ 2 ಗಂಟೆಗೆ ಈದ್‌ಗಾಹ್‌ದಲ್ಲಿ ಈ ಮುಬಾಹಿಲದಲ್ಲಿ ಭಾಗವಹಿಸಿ ಆಮೀನ್ ಎಂದು ಹೇಳಲು ಆಗಮಿಸಿದರೆ ಇದು ಉತ್ತಮವಾದ ವಿಷಯವಾಗುವುದು. (ಅದೇ ಪುಟ–452)

ಮುಂದಿನ ಸಂಚಿಕೆಯಲ್ಲಿ, ಅಮೃತಸರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಮೌಲ್ವಿ ಅಬ್ದುಲ್ ಹಖ್ ಘಜ್ನವಿಯ ನಡುವಿನ ಮುಬಾಹಿಲದ ಘಟನೆಯನ್ನು ನಾವು ವಿವರಿಸುತ್ತೇವೆ.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಪ್ರೀತಿ, ಪ್ರೀತಿ ಅಲ್ಲ ಶತ್ರುತನವಾಗಿದೆ. ಅವರ ದೈಹಿಕ ಕುಶಲತೆ, ಆಧ್ಯಾತ್ಮಿಕ ಹಾಗೂ ನೈತಿಕ ಸುಧಾರಣೆಗೆ ಆಧ್ಯತೆ ರೀತಿಯಲ್ಲಿ ಗಮನಹರಿಸಬೇಕಾಗಿದೆ. ಸಂತಾನವು ಪ್ರಯತ್ನಪಟ್ಟಾಗಲೂ ಸುಧಾರಣೆಗೊಳ್ಳದಿದ್ದರೆ ಒಂದು ಸಮಯ ಹೀಗೆ ಬರುವುದು. ಅದರಿಂದ ಪ್ರತ್ಯೇಕಗೊಳ್ಳಬೇಕಾಗುತ್ತದೆ. ಏಕೆಂದೆರ ಹೆತ್ತವರು ನಮ್ಮ ತಪ್ಪುಗಳನ್ನು ಕಡೆಗಣಿಸುವವರಾಗಿದ್ದಾರೆ ಎಂದು ತಿಳಿದುಕೊಂಡಾಗ ಅವರು ದುರ್ಮಾರ್ಗ ಹಿಡಿಯುತ್ತಾರೆ. ಆದರೆ ನಮ್ಮ ತಪ್ಪುಗಳನ್ನು ತಡೆಯುವವರಾಗಿದ್ದಾರೆ ಎಂದು ತಿಳಿದುಕೊಂಡಾಗ ಅವರ ಸುಧಾರಣೆಯಾಗುತ್ತದೆ. ಆದುದರಿಂದ ನಮಗೆ ಸಂತಾನದ ಪ್ರೀತಿಗಿಂತ ಹೆಚ್ಚು ಅಲ್ಲಾಹನ ಪ್ರೀತಿಗೆ ಆಧ್ಯತೆ ಕೊಡಬೇಕಾಗಿದೆ ಇದು ಕೇವಲ ಅಲ್ಲಾಹನ ಸಂಪ್ರೀತಿಗೆ ಕಾರಣವಾಗುವುದಿಲ್ಲ. ಬದಲು ತನ್ನ ಸತಾನದ ಸುರಕ್ಷನತೆಯ ಮಾರ್ಗವು ಆಗಿರುತ್ತದೆ.

ಏಮನ್ ಅಸಾನೆ ಫಿನ್ನಕ ಗಫೂರುರ್ರಹೀಮ್– ಮೊದಲೇ ಹೇಳಿದ್ದೆ ನನ್ನ ಸಂತಾನ ಬಹುದೇವಾರಾಧಕರಾದರೆ ಅದು ನನ್ನ ಸಂತಾನವಲ್ಲ. ಆದರೆ ನಬಿಯವರಲ್ಲಿ ಕರುಣೆಯು ಇರುತ್ತದೆ. ಸಂತಾನವನ್ನು ಸಂತಾನವಲ್ಲ ಎಂದು ಭಾವಿಸುವುದು ಮತ್ತು ಅಲ್ಲಾಹನ ಪ್ರೀತಿಗೆ ಆದ್ಯತೆ ನೀಡುವುದು ಬೇರೆಯಾಗಿದೆ ಮತ್ತು ಅವರಿಗಾಗಿ ಅಲ್ಲಾಹನಿಂದ ದಯೆಯನ್ನು ಯಾಚಿಸುವುದು ಬೇರೆಯಾಗಿದೆ. ಅಂದ ಹಾಗೆ ಹಝ್ರತ್ ಇಬ್ರಾಹಿಂ(ಅ) ಪ್ರಾರ್ಥಿಸುತ್ತಾರೆ. ಮೊದಲು ನನ್ನ ಸಂತಾನವನ್ನು ಬಹುದೇವಾರಾಧಕತೆಯಿಂದ ರಕ್ಷಿಸು. ಆದರೆ ಅವರಲ್ಲಿ ಯಾರಾದರೂ ನನ್ನ ಮಾರ್ಗದಲ್ಲಿ ನಡೆಯದವರಾದರೆ ನಾನು ಅವರಿಗೆ ಹೇಳುವೆನು. ನೀವು ನನ್ನ ಸಂತಾನವಲ್ಲ. ಆದರೆ ನೀನು ಅತ್ಯಂತ ಕ್ಷಮಿಸುವವನು, ಕರುಣಾನಿಧಿಯು ಆಗಿರುವೆ. ಆದ್ದರಿಂದ ಅವರ ಪಾಪಗಳನ್ನು ಕ್ಷಮಿಸು ಮತ್ತು ಅವರ ಪ್ರಗತಿಯ ಸಾಮಗ್ರಿಗಳನ್ನು ದಯಪಾಲಿಸಲು ನಿನ್ನೊಂದಿಗೆ ಬೇಡುವೆನು. ಅದರಲ್ಲಿ ತಿಳಿಸಲಾದ ವಿಷಯವೇನೆಂದರೆ ಅಸಂತುಷ್ಟಿಯ ಅರ್ಥ ಕಠಿಣ ಹೃದಯತೆಯಲ್ಲ. ಬದಲು ಶಿಕ್ಷೆಯು ಬಾಹ್ಯರೂಪದಲ್ಲಿರಿ. ಮನಃಪೂರ್ವಕವಾಗಿ ಅವರಿಗಾಗಿ ಅವರ ಸುಧಾರಣೆಗಾಗಿ ಪ್ರಾರ್ಥಿಸುತ್ತಿರಬೇಕು. ಅವರ ವಿನಾಶ ಬಯಸುವುದಲ್ಲ. **(ತಫ್ಸೀರ್ ಕಬೀರ್ ಪುಟ 484, ಸಂಪುಟ–3 ಮುದ್ರಣ 2010 ಖಾದಿಯಾನ್)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್ಶಾದ್ (ಮರ್ಕಝಿಯಾ, ಖಾದಿಯಾನ್)**

**ಪುರುಷನು ಮೈತುಂಬ ಬಟ್ಟೆ ಧರಿಸುವವನಾದರೆ well dressed ಅಂದುಕೊಳ್ಳುತ್ತಾನೆ. ಅಂದರೆ ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಆದರೆ ಹೆಣ್ಣು well dressed ಅಂದುಕೊಳ್ಳಬೇಕಾದರೆ ಅವಳು ಮಿನಿಸ್ಕರ್ಟ್ ಹಾಕಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.**

**ಸ್ತ್ರೀಯರು ತನ್ನನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದಾರೆ. ತನ್ನನ್ನು ಅಪಮಾನಿಸಿಕೊಳ್ಳುತ್ತಿದ್ದಾರೆ. ಅಹ್ಮದಿ ಹುಡುಗಿಯರು, ಸ್ತ್ರೀಯರು ತಮ್ಮ ಗೌರವ ಘನತೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳುವುದಲ್ಲಿಯೇ ಇದೆ ಎಂದು ಭಾವಿಸಬೇಕು. ಏಕೆಂದರೆ ಲಜ್ಜೆಯೇ ಕವಚರಕ್ಷೆಯಾಗಿದೆ. ಅದುವೇ ನಮ್ಮನ್ನು ಇತರರ ದೃಷ್ಟಿಯಿಂದ ರಕ್ಷಿಸುತ್ತದೆ.**

**ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಡನೆ ಕೇಳಲಾದ ಪ್ರಶ್ನೆಗಳಿಗೆ ವಿವೇಕಯುತ ಉತ್ತರಗಳು.**

**ಸೂಚನೆ:** ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿಭಿನ್ನ ಸದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ಕಾರ್ಯಕ್ರಮಗಳಲ್ಲಿ ಮುಖ್ಯ ಸಮಸ್ಯೆಗಳ ಕುರಿತು ನೀಡಿದ ಅಧ್ಯಾಪನೆಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್-ಫಝ್ಲ್ International ನ ಕೃಪೆಯಿಂದ ಮುದ್ರಿಸಲಾಗುತ್ತದೆ. (ಸಂಪಾದಕರು)

**ಭಾಗ-1**

**ಪ್ರಶ್ನೆ:** ಮಹಿಳೆಯರು ಮುಟ್ಟಿನ ಅವಧಿಯಲ್ಲಿ ಪವಿತ್ರ ಖುರ್‌ಆನ್‌ನ್ನು ತೆಗೆದುಕೊಳ್ಳಲು ಮತ್ತು ಪಠಿಸಲು ಅಂತೆಯೇ ಕಂಪ್ಯೂಟರ್ ಅಥವಾ I-pad ಇತ್ಯಾದಿ ಮೂಲಕ ಖುರ್‌ಆನ್ ಪಠಿಸುವ ಕುರಿತು ವ್ಯಕ್ತಿಯೊಬ್ಬನು ವಿವಿಧ ಉಲಮಾ, ತತ್ವಜ್ಞಾನಿಗಳ ಪುರಾವೆಗಳನ್ನು ಆಧರಿಸಿ ಒಂದು ಸಂಶೋಧನೆ ಹುಝೂರರ ಸಮ್ಮುಖದಲ್ಲಿ ಪ್ರಸ್ತುತಪಡಿಸಿ ಆ ಸಮಸ್ಯೆಗಳ ಕುರಿತು ಹುಝೂರರಿಂದ ಮಾರ್ಗದರ್ಶನ ಬಯಸಿದರು.

ಹುಝೂರ್ ಅನ್ವರ್(ಅಬಿಅ) ತನ್ನ ಪತ್ರದಲ್ಲಿ ದಿನಾಂಕ: 5 ಅಕ್ಟೋಬರ್ 2018 ರಲ್ಲಿ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಈ ಸಮಸ್ಯೆ ಕುರಿತು ಉಲಮಾಅ ಮತ್ತು ಧಾರ್ಮಿಕ ತತ್ವಜ್ಞಾನಿಗಳ ಮಧ್ಯೆ ಭಿನ್ನತೆ ಕಂಡುಬರುತ್ತಿವೆ. ವಿಭಿನ್ನ ಉಲಮಾಅಗಳು ಸಹ ತನ್ನ ಖುರ್‌ಆನ್‌ನ ಜ್ಞಾನ ಅನುಸಾರವಾಗಿ ಈ ಕುರಿತು ವಿಭಿನ್ನ ಸಲಹೆಗಳನ್ನು ನೀಡಿರುತ್ತಾರೆ.

ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಈ ಕುರಿತು ನನ್ನ ಅಭಿಪ್ರಾಯವೆಂದರೆ, ಮುಟ್ಟಿನ ಅವಧಿಯಲ್ಲಿ ಸ್ತ್ರೀಯರು ತಮಗೆ ಪವಿತ್ರ ಖುರ್‌ಆನ್‌ನ ಎಷ್ಟು ಭಾಗ ಕಂಠಸ್ತವಾಗಿರುತ್ತದೆ. ಅದನ್ನು ಸ್ಮರಣೆ ರೂಪದಲ್ಲಿ ಉಚ್ಚರಿಸಿಕೊಳ್ಳಬಹುದು. ಅಲ್ಲದೇ ಅಗತ್ಯ ಬಿದ್ದಾಗ ಯಾವುದೇ ಸ್ವಚ್ಛ ಬಟ್ಟೆಯಿಂದ ಪವಿತ್ರ ಖುರ್‌ಆನ್‌ನ್ನು ಹಿಡಿಯಬಹುದು. ಯಾರಿಗಾದರೂ ಪುರಾವೆಗಳು ಒದಗಿಸಬೇಕಾದರೆ ಅಥವಾ ಮಕ್ಕಳಿಗೆ ಪವಿತ್ರ ಖುರ್‌ಆನ್ ಬೋಧಿಸಲು ಪವಿತ್ರ ಖುರ್‌ಆನ್‌ನ ಯಾವುದಾದರೂ ಭಾಗ ಪಠಿಸಲೂಬಹುದು. ಆದರೆ ವಿಧಿಬದ್ಧವಾಗಿ ಪಠಿಸಬಾರದು. ಅದೇ ರೀತಿ ಈ ಅವಧಿಯಲ್ಲಿ ಮಹಿಳೆಗೆ ಕಂಪ್ಯೂಟರ್ ಇತ್ಯಾದಿಯ ಮೇಲೆ ಪವಿತ್ರ ಖುರ್‌ಆನ್‌ನ್ನು ಭೌತಿಕವಾಗಿ ಹಿಡಿಯಲಾಗುವುದಿಲ್ಲ. ಆದರೂ ಕ್ರಮಬದ್ಧ ರೀತಿಯಲ್ಲಿ ಪಾರಾಯಣಕ್ಕೆ ಅನುಮತಿ ಇಲ್ಲ. ಆದರೆ ಯಾವುದೇ ಕಾರಣಕ್ಕೆ, ಉದಾಹರಣೆಗೆ ಪುರಾವೆ ಹುಡುಕಬೇಕಾದರೆ ಅಥವಾ ಯಾರಿಗಾದರೂ ಸಾಕ್ಷ್ಯ ಒದಗಿಸಬೇಕಾದಲ್ಲಿ ಕಂಪ್ಯೂಟರ್ ಇತ್ಯಾದಿಯ ಮೂಲಕ ಪವಿತ್ರ ಖುರ್‌ಆನ್‌ನಿಂದ ಪ್ರಯೋಜನ ಪಡೆಯಬಹುದಾಗಿದೆ. ಅದಕ್ಕೇನೂ ಅಡ್ಡಿಯಿಲ್ಲ.

**ಪ್ರಶ್ನೆ:** ಮಹಿಳೆಯೋರ್ವಳು ಮುಟ್ಟಿನ ಅವಸ್ಥೆಯಲ್ಲಿ ಮಸೀದಿಗೆ ಬರುವ ವಿಷಯವಾಗಿ ವಿವಿಧ ಧದೀಸುಗಳು ಹಾಗೂ ಪ್ರಸಕ್ತ ಕಾಲದಲ್ಲಿ ಮಹಿಳೆಯರ ಆ ದಿನಗಳ ಸ್ವಚ್ಛತೆಗೆ ಆಧುನಿಕ ರೀತಿಯ ಸಾಮಗ್ರಿಗಳು ಲಭ್ಯವಿದೆ. ಅದನ್ನು ಹುಝೂರರ ಮುಂದೆ ಪ್ರಸ್ತಾಪಿಸುತ್ತಾ ಮಸೀದಿಯಲ್ಲಿ ನಡೆಯುವ ಜಮಾಅತಿನ ಸಭೆ, ಸಮಾರಂಭ ಮುಂತಾದ ಕಾರ್ಯಕ್ರಮದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯ ಬಗ್ಗೆ ಮತ್ತು ಅಂತಹ ಅಮುಸ್ಲಿಮ್ ಸ್ತ್ರೀಯರು ಮಸೀದಿಗೆ ಭೇಟಿ ನೀಡುವ ಕುರಿತು ಹುಝೂರ್ ಅನ್ವರ್ ಅವರಿಂದ ಮಾರ್ಗದರ್ಶನ ಪಡೆಯಬಯಸಿದರು. ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ: 14 ಮೇ 2020 ರಲ್ಲಿ ನಮೂದಿಸಿದಂತೆ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಮುಟ್ಟಿನ ಅವಸ್ಥೆಯಲ್ಲಿ ಸ್ತ್ರೀಯರು ಮಸೀದಿಯಿಂದ ಯಾವುದೇ ವಸ್ತು ತರಲು ಅಥವಾ ಮಸೀದಿಗೆ ಯಾರನ್ನಾದರು ಬಿಟ್ಟು ಬರಲು ಅಥವಾ ಮಸೀದಿಗೆ ಹೋಗಿ ಕುಳಿತುಕೊಳ್ಳುವ ವಿಷಯವಾಗಿ ಬೇರೆ ಬೇರೆ ಆಜ್ಞೆಗಳು ನಮಗೆ ಹುಝೂರ್(ಸ) ಸ್ಪಷ್ಟ ರೂಪದಲ್ಲಿ ತಿಳಿಸಿರುತ್ತಾರೆ. ಅಂದ ಹಾಗೆ ನೀವು ನಿಮ್ಮ ಪತ್ರದಲ್ಲೂ ಅದನ್ನು ಪ್ರಸ್ತಾಪಿಸಿದ್ದೀರಿ. ಹುಝೂರ್ (ಸ) ತನ್ನ ಪತ್ನಿಯರಿಗೆ ಈ ಅವಸ್ಥೆಯಲ್ಲಿ ಚಾಪೆ ಇತ್ಯಾದಿ ಮಸೀದಿಗೆ ಹೋಗಿ ಹಾಸಿ ಬರಲು ಅನುಮತಿ ನೀಡುತ್ತಿದ್ದರು. ಆದರೆ ಮಸೀದಿಗೆ ಹೋಗಿ ಕುಳಿತುಕೊಳ್ಳಲು ಹುಝೂರ್ (ಸ) ನಿಷೇಧಿಸಿದರು. ಆ ಬಗ್ಗೆ ಹದೀಸುಗಳಲ್ಲಿ ಉಲ್ಲೇಖಗಳಿವೆ. ಅಂದ ಹಾಗೆ ಅವರು ಹಬ್ಬಗಳ ಸಂದರ್ಭದಲ್ಲಿ ಯಾವ ಹುಡುಗಿಯರಿಗೆ, ಪರದೆ ಕಡ್ಡಾಯ ಮತ್ತು ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಹೀಗೆ ಎಲ್ಲರನ್ನು ಹಬ್ಬಕ್ಕಾಗಿ (ಈದ್) ಹೋಗಲು ಆಗ್ರಹಪೂರ್ವಕ ನಿರ್ದೇಶನ ನೀಡಿದರು. ತಲೆಯ ಮೇಲೆ ವಸ್ತ್ರವಿಲ್ಲದವರನ್ನೂ ಸಹ ತನ್ನ ಯಾವುದೇ ಸಹೋದರಿಯಿಂದ ವಸ್ತ್ರವನ್ನು ಪಡೆದುಕೊಂಡಾದರೂ ಹೋಗಲು ಆಗ್ರಹಿಸಿದರು. ಆದರೆ ಅದರ ಜೊತೆಯಲ್ಲಿಯೇ ಮುಟ್ಟಿನ ಅವಸ್ಥೆಯ ಸ್ತ್ರೀಯರಿಗೆ ನಮಾಝಿನ ಸ್ಥಳದಿಂದ ಪ್ರತ್ಯೇಕವಾಗಿದ್ದು ದುಆದಲ್ಲಿ ಪಾಲ್ಗೊಳ್ಳಲು ನಿರ್ದೇಶಿಸಿದರು.

ಅದೇ ರೀತಿ ಹಜ್ಜತುಲ್ ವಿದಾ (ಅಂತಿಮ ಹಜ್ಜ್) ಸಂದರ್ಭದಲ್ಲಿ ಹೆಚ್ಚಿನ ಮುಸ್ಲಿಮರು ಉಮ್ರಾಹ್ ಮಾಡುತ್ತಿದ್ದರು. ಹಝ್ರತ್ ಆಯಿಶಾ(ರ) ಮುಟ್ಟಿನ ಅವಸ್ಥೆಯಲ್ಲಿದ್ದರು. ಆದ್ದರಿಂದ ಹುಝೂರ್(ಸ) ಅವರಿಗೆ ಉಮ್ರಾಹ್ ಮಾಡಲು ಅನುಮತಿ ನೀಡಲಿಲ್ಲ. ಏಕೆಂದರೆ ತವಾಫ್ (ಪ್ರದೀಕ್ಷಣೆ) ಮಾಡಲು ಮಸೀದಿಯಲ್ಲಿ ಹೆಚ್ಚಿನ ಸಮಯ ಕಳೆಯಬೇಕಾಗುತ್ತದೆ. ಮತ್ತೆ ಈ ಅವಸ್ಥೆಯಿಂದ ಪಾರಾದಾಗ ಹಜ್ಜ್ ಆದ ನಂತರ ಅವರಿಗೆ ಪ್ರತ್ಯೇಕವಾಗಿ ಉಮ್ರಾಹ್ ಮಾಡಲು ಕಳುಹಿಸಿದರು.

ಆದುದರಿಂದ ಹದೀಸುಗಳಲ್ಲಿ ಇಷ್ಟೆಲ್ಲಾ ಸ್ಪಷ್ಟತೆಯಿರುವಾಗ ನಮ್ಮ ಇಚ್ಛಾನುಸಾರ ನಡೆಯಲು ಯಾವ ಕಾರಣವು ಇಲ್ಲ. ಹೊಸ ಹೊಸ ಮಾರ್ಗಗಳು ಹುಡುಕಬೇಕಾಗಿಲ್ಲ.

ಮೊದಲಿನ ಕಾಲದಲ್ಲಿ ಸ್ತ್ರೀಯರಿಗೆ ಈಗಿರುವಂತೆ ಸ್ವಚ್ಛತೆಯ ಸಾಮಗ್ರಿಗಳು ಇರಲಿಲ್ಲ ಎಂಬ ಪ್ರಶ್ನೆ ಇದೆ. ಸರಿ ಎಂದಾದರೂ ಈ ರೀತಿ ಆಧುನಿಕ ಸಾಮಗ್ರಿಗಳು ಇರಲಿಲ್ಲ ಎಂದ ಮಾತ್ರಕ್ಕೆ ಅವರು ತಮ್ಮ ಸ್ವಚ್ಛತೆ ಕಾಪಾಡುತ್ತಿರಲಿಲ್ಲ ಎಂದಾಗುವುದಿಲ್ಲ. ಆ ದಿನಗಳಲ್ಲಿ ಅವರ ರಕ್ತ ಅಲ್ಲಲ್ಲಿ ಚೆಲ್ಲುತ್ತಿರುತ್ತದೆ ಎಂದೇನಿಲ್ಲ. ಮನುಷ್ಯನು ಎಲ್ಲಾ ಕಾಲದಲ್ಲೂ ತನ್ನ ಅಗತ್ಯಕ್ಕನುಸಾರವಾಗಿ ಒಳ್ಳೆಯ ವ್ಯವಸ್ಥೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಹಾಗೆಯೇ ಮೊದಲಿನ ಕಾಲದಲ್ಲೂ ಸ್ತ್ರೀಯರು ತಮ್ಮ ಸ್ವಚ್ಛತೆಗಾಗಿ ಉತ್ತಮ ಏರ್ಪಾಡು ಮಾಡಿಕೊಳ್ಳುತ್ತಿದ್ದರು.

ಈ ಆಧುನಿಕ ಯುಗದ ಸ್ವಚ್ಛತಾ ಸಾಮಾಗ್ರಿಗಳಲ್ಲೂ ನ್ಯೂನತೆಗಳಿವೆ. ಹೆಚ್ಚಿನ ಪ್ರಮಾಣದಲ್ಲಿ ರಕ್ತಸುರಿಯುವ ಮಹಿಳೆಯರ Pad Leak ಆಗುವ ಕಾರಣ ಕೆಲವೊಮ್ಮೆ ಬಟ್ಟೆಗಳು ಹಾಳಾಗುತ್ತವೆ.

ಆದುದರಿಂದ ಇಸ್ಲಾಂ ಧರ್ಮ ನೀಡಿರುವ ಶಿಕ್ಷಣಗಳು ಸರ್ವಕಾಲಿಕವು ಮತ್ತು ಸರ್ವರಿಗೆ ಒಂದೇ ರೀತಿಯಾಗಿವೆ. ಅದರ ಮೇಲೆ ಎಲ್ಲಾ ಕಾಲಕ್ಕೂ ಅದೇ ರೀತಿಯ ನಡತೆಯಿರುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲೂ ಅದೇ ರೀತಿಯಿತ್ತು.

ಯಾವುದೇ ಸ್ಥಳದಲ್ಲಿ ಏನಾದರೂ ವಿವಶತೆಯಿದ್ದರೆ, ನಮಾಝಿನ ಕೋಣೆ ಹೊರತು ಬೇರೆ ಸ್ಥಳವಿಲ್ಲ. ಆ ಸಂದರ್ಭದಲ್ಲಿ ಅದೇ ಕೋಣೆಯ ಬಾಗಿಲ ಸಮೀಪ ವಿಶೇಷ ರೀತಿಯಲ್ಲಿ ನಮಾಝ್ ನಿರ್ವಹಿಸದ ಸ್ಥಳದಲ್ಲಿ ಅಂತಹ ಸ್ತ್ರೀಯರು ಕುಳಿತುಕೊಳ್ಳಬಹುದಾಗಿದೆ. ಅಥವಾ ಮಸೀದಿಯ ಕೊನೆಯ ಭಾಗದಲ್ಲಿ ಅಂತಹ ಸ್ತ್ರೀಯರನ್ನು ಕುರ್ಚಿಗಳು ಹಾಯಿಸಿ ಅವರಿಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಬಹುದಾಗಿದೆ. ಏಕೆಂದರೆ ನಮಾಝ್ ನಿರ್ವಹಿಸುವ ಜಾಗವು ಹೊಲಸಾಗುವಂತಹ ಪ್ರಸಂಗ ಬರಬಾರದು.

ಅಮುಸ್ಲಿಮರು ಮಸೀದಿಗೆ ಭೇಟಿ ನೀಡುವ ವಿಷಯದಲ್ಲಿ. ಮೊದಲಂತೂ ಭೇಟಿಯ ನಡುವೆ ಅವರಿಗೆ ಮಸೀದಿಯಲ್ಲಿ ಕುಳಿತುಕೊಳ್ಳಲಾಗುವುದಿಲ್ಲ, ಬದಲು ಕೇವಲ ಮಸೀದಿಯನ್ನು ತೋರಿಸಲಾಗುತ್ತದೆ. ಅದರ ಒಟ್ಟು ಸಮಯ ಮಸೀದಿಗೆ ಹೋಗಿ ಚಾಪೆ ತರುವ ಅಥವಾ ಹಾಸಿ ಬರುವಷ್ಟೇ ಇರುತ್ತದೆ. ಆದರೆ ಅವರಿಗೆ ಮಸೀದಿಯಲ್ಲಿ ಕುಳಿತುಕೊಳ್ಳುವ ಅವಶ್ಯಕತೆ ಬಿದ್ದರೆ ನಮಾಝ್ ನಿರ್ವಹಿಸುವ ಜಾಗ ಬಿಟ್ಟು ಮಸೀದಿಯ ಕೊನೆಯ ಭಾಗದಲ್ಲಿ ಕುರ್ಚಿಗಳಲ್ಲಿ ಕುಳ್ಳಿರಿಸಬಹುದು.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 19 August 2021, Issue No. 33

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 32ರ ವರದಿಯ ಉಳಿದ ಭಾಗ)**

* ಮುಕರ್ರಮ್ ಅಬ್ದುಲ್ಲ ಸೆರೀನ್ ಸಾಹಿಬ್ ಅವರ ತಂದೆ ಅನೇಕ ವರ್ಷಗಳಿಂದ ಅಹ್ಮದಿಯರಾಗಿದ್ದಾರೆ, ಅವರು ತಮ್ಮ ತಂದೆಯವರ ಜೊತೆಯಲ್ಲಿ ರಷ್ಯದಲ್ಲಿ ವಾಸಿಸುತ್ತಿದ್ದರು. ಆದರೆ ಈಗ ವಿದ್ಯಬ್ಯಾಸದ ಕಾರಣದಿಂದಾಗಿ ಹಾಲೆಂಡಿನಲ್ಲಿ ವಾಸಿಸುತ್ತಿದ್ದಾರೆ. ಅವರ ತಂದೆಯವರ ಮುಖಾಂತರ ಅವರಿಗೆ ತಬ್ಲೀಗ್ ಆಗುತಿತ್ತು. ಆದರೆ ಇನ್ನು ಅವರು ಬೈಅತ್ ಮಾಡಿರಲಿಲ್ಲ. ಈ ವರ್ಷ ಅವರು ತಮ್ಮ ತಂದೆಯರ ಜೊತೆಯಲ್ಲಿ ಈ ಜಲ್ಸದಲ್ಲಿ ಭಾಗವಹಿಸಲು ಬಂದಿದ್ದರು. ಜಲ್ಸದ ಮೊದಲ ದಿನ ಪ್ರಶ್ನೋತ್ತರ ಸಭೆಯು ನಂತರ ನಮ್ಮ ಮುಬಲ್ಲಿಗರು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಕುರಿತು ಹೇಳಿದರು. ಅದರ ಅಂತ್ಯದಲ್ಲಿ ಅವರಿಗೆ ಹೇಳಿದರು. ನೀವು ಅಲ್ಲಾಹನೊಡನೆ ದುಆ ಮಾಡಿರಿ. ಓ ಅಲ್ಲಾಹ್ ಈ ಜಲ್ಸದಲ್ಲಿ ಈ ವ್ಯಕ್ತಿಯ ಸತ್ಯಶೋಧನೆಗಾಗಿ ಬಂದಿರುವೆನು ನನಗೆ ಮಾರ್ಗದರ್ಶನ ನೀಡು ಎಂದು. ಅವರು ಹೇಳಿದರು. ನಾನು ಇದಕ್ಕಿಂತ ಮುಂಚೆಯೇ ದುಆ ಮಾಡಿರುತ್ತೇನೆ. ಆದರೆ ಏನು ಪರಿಣಾಮ ಆಗಲಿಲ್ಲ. ಅವರಿಗೆ ಮನವರಿಕೆ ಮಾಡಲಾಯಿತು. ದುಆ ಒಮ್ಮೆ ಮಾತ್ರ ಮಾಡುವುದಲ್ಲ. ಏಕೆಂದರೆ ದುಆ ಜೊತೆಯಲ್ಲಿ ಕೆಲವು ಶರತ್ತುಗಳಿರುತ್ತವೆ. ಅದನ್ನು ಮನದಲ್ಲಿಟ್ಟುಕೊಂಡು ನೀವು ಕಾಳಜಿಯಿಂದ ಕೆಲ ಅವಧಿಯವರೆಗೆ ದುಆ ಮಾಡಬೇಕು.

ಜಲ್ಸದ ಮರುದಿನ ಹುಝೂರ್ ಅನ್ವರ್ ರವರ ತಬ್ಲೀಗಿ ಅತಿಥಿಗಳ ಜೊತೆಯಲ್ಲಿ ಆದ ಸಭೆಯು ನಂತರ ಅವರು ಹೇಳಿದರು. ನನಗೆ ಖುರ್‌ಆನ್‌ನಿಂದ ಮಸೀಹ್ ಮೌಊದ್(ಅ) ರವರ ಸತ್ಯತೆಯ ಬಗ್ಗೆ ಯಾವುದಾದರು ಒಂದು ಸಾಕ್ಷ್ಯ ಹೇಳಿ, ನಮ್ಮ ಮುಬಲ್ಲಿಗರು ಅವರಿಗೆ ವಚನ – **“ವಲೌ ತಖವ್ವಲ ಅಲೈನ ಬಅಝುಲ್ ಆಖಾವೀಲ್** ಮತ್ತು ವಚನ **ಇನ್ನಲ್ಲಝೀನ ಯಫ್‌ತರೂನ ಅಲಲ್ಲಾಹಿಲ್ ಕಝಿಬ ಲಾ ಯುಫ್‌ಲಿಹೂನ್”** ವಿವರಿಸುತ್ತ ಹುಝೂರ್(ಅ) ರವರ ಕೆಲವು ಭವಿಷ್ಯವಾಣಿಗಳು ಮತ್ತು ಜಮಾಅತಿನ ಪ್ರಗತಿಯ ಬಗ್ಗೆ ಮಾತನಾಡಿದಾಗ ಹೇಳಿದರು. ನಾನು ಬೈಅತ್ ಮಾಡಬಯಸುತ್ತೇನೆ. ಏಕೆಂದರೆ ಅಲ್ಲಾಹನು ನನಗೆ ದೃಷ್ಟಾಂತ ತೋರಿಸಿರುವನು. ಯಾವ ದೃಷ್ಟಾಂತವನ್ನು ನೋಡಿದ್ದೀರಿ? ಎಂದು ಕೇಳಿದಾಗ ಹೇಳಿದರು. ನಿನ್ನೆ ರಾತ್ರಿ ನಾನು ಅಲ್ಲಾಹನೊಡನೆ ತುಂಬ ಕಾಳಜಿಯಿಂದ ಕಳವಳಗೊಂಡು ಸಾಷ್ಟಾಂಗದಲ್ಲಿ ದುಆ ಮಾಡಿದೆನು ಮತ್ತು ರಾತ್ರಿ ಮಲಗಿದೆನು. ಸ್ವಪ್ನದಲ್ಲಿ ಒಂದು ದೊಡ್ಡ ಗೋಡೆಯ ಮೇಲೆ ದಪ್ಪ ಅಕ್ಷರದಲ್ಲಿ **“ಅಲ್ ಅಹ್ಮದಿಯಾ”** ಎಂದು ಬರೆಯಲಾಗಿತ್ತು. ಅದರಿಂದ ಅಸಾಮಾನ್ಯ ರೀತಿಯಲ್ಲಿ ಪ್ರಕಾಶ ಹೊರಡುತಿತ್ತು. ಮತ್ತೆ ನಾನು ಜಲ್ಸಸ್ಥಳಕ್ಕೆ ಪ್ರವೇಶಿಸಿದನು. ಹುಝೂರರ ಜರ್ಮನ್ ಅತಿಥಿಗಳೊಡನೆಯ ಭಾಷಣ ಕೇಳಿದೆನು. ಅದರ ನಡುವೆಯೇ ನನ್ನ ಮನಸ್ಸಿನಲ್ಲಿ ಒಂದು ಬಯಕೆ ಉಂಟಾಯಿತು. ನನಗೆ ಹುಝೂರರ ಜೊತೆ ಮತ್ತು ಅವರ ಸಮೀಪದಲ್ಲಿ ನಿಲ್ಲುವ ಅವಕಾಶ ದೊರೆತರೆ. ಎಷ್ಟು ಒಳ್ಳೆಯದಾಗಿರಬಹುದು. ಸ್ವಲ್ಪ ಸಮಯದ ನಂತರ ನನ್ನ ಮೇಲೆ ಸ್ವಪ್ನ ರೀತಿಯ ಭಾವನೆ ಬಂತು. ನಾನು ನೋಡುತ್ತಿದೇನೆ. ವೇದಿಕೆಯ ಮೇಲೆ ಹುಝೂರರ ಪಕ್ಕದಲ್ಲಿ ನಿಂತುಕೊಂಡಿದ್ದೇನೆ.

ಅವರು ಹೇಳುತ್ತಾರೆ. ಅನಂತರ ಸತ್ಯ ನನ್ನಲ್ಲಿ ಮೂಡಿತು ಮತ್ತು ನನ್ನ ಇನ್ನಷ್ಟು ಖಾತರಿಗಾಗಿ ಖುರ್‌ಆನ್‌ನಿಂದ ಹುಝೂರರ ಮಸೀಹ್ ಮೌಊದ್(ಅ) ರವರ ಸತ್ಯತೆ ಬಗ್ಗೆ ಕೇಳಿದೆ, ವಾಸ್ತವದಲ್ಲಿ ಅದರ ಮುಂಚೆಯೇ ದುಅ ನಂತರ ಸ್ವಪ್ನದಲ್ಲಿಯೇ ನನಗೆ ತೃಪ್ತಿಯಾಗಿತ್ತು. ಅಂದ ಹಾಗೆ ಜಲ್ಸದ ಮೂರನೆಯ ದಿನ ಸಾಮೂಹಿಕ ಬೈಅತ್‌ನಲ್ಲಿ ಅವರು ಭಾಗಿಯಾದರು.

* ಬೆಲ್ಜಿಯಂನಿಂದ ಬಂದ ತಂಡದಲ್ಲಿ ಮಿತ್ರರೊಬ್ಬರು ಮುಹಮ್ಮದ್ ಇರಾನಿ ಭಾಗವಹಿಸಿದ್ದರು. ಅವರ ವಯಸ್ಸು 40 ರ ಸಮೀಪದಲ್ಲಿತ್ತು. ಹಿಂದಿನ ಒಂದು ವರ್ಷದಿಂದ ತಬ್ಲೀಗ್‌ನಲ್ಲಿ ಒಳಪಟ್ಟಿದ್ದರು. ಜಲ್ಸದಲ್ಲಿ ಭಾಗವಹಿಸಿ ಹುಝೂರೆ ಅನ್ವರ್ ಅವರ ಭೇಟಿಯ ನಂತರ ಅವರಿಗೆ ಬೈಅತ್ ಮಾಡುವ ಭಾಗ್ಯ ದೊರೆಯಿತು. ಅವರು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು ನಾನು ಹಿಂದಿನ ಹತ್ತು ವರ್ಷಗಳಿಂದ ನಮಾಝ್ ನಿರ್ವಹಿಸುತ್ತಿದ್ದೇನೆ. ಅದರೆ ಇಲ್ಲಿ ಬಂದು ನನಗೆ ದೊರೆತಂತಹ ನೆಮ್ಮದಿ ನನ್ನ ಜೀವನದಲ್ಲಿ ಎಂದೂ ಅನುಭವಕ್ಕೆ ಬರಲಿಲ್ಲ.

ಅವರ ಕುರಿತು ಬೆಲ್ಜಿಯಂನ ಮುಬಲ್ಲಿಗಳು ಹೇಳುತ್ತಾರೆ. ಮುಹಮ್ಮದ್ ಇಲ್ಯಾನಿ ಸಾಹಿಬ್ ಮೂರು ದಿನಗಳು ಜಲ್ಸದ ದೃಶ್ಯಗಳನ್ನು ನೋಡಿ ಅಳುತ್ತಿದ್ದರು. ಒಂದು ವರ್ಷದ ತಬ್ಲೀಗ್ ಒಂದು ಕಡೆಯಾದರೆ ಜಲ್ಸದ ಮೂರು ದಿನಗಳು ಆ ಒಂದು ವರ್ಷದಲ್ಲಿ ಆಗದ್ದನ್ನು ಸಾಧಿಸಿ ತೋರಿಸಿದರು. ಇದು ಕೇವಲ ಅಲ್ಲಾಹನ ಅನುಗ್ರಹ ಹಾಗೂ ಖಲೀಫರ ಕಾರುಣ್ಯದಿಂದ ಸಾಧ್ಯವಾಯಿತು. ಹುಝೂರರನ್ನು ಕಂಡು ಅವರ ಮನಸ್ಸು ಪರಿವರ್ತನೆಗೊಂಡಿತು.

* ಬೆಲ್‌ಜಿಯಮ್‌ದಿಂದ ಬಂದ ಮೂರು ಅತಿಥಿಗಳು ಅಲ್ಲಾಹನ ಅನುಗ್ರಹದಿಂದ ಹುಝೂರರ ಕೈಯಲ್ಲಿ ಬೈಅತ್ ಮಾಡಿದರು ಮತ್ತು ಬೈಅತ್ ಮಾಡಿದ ನಂತರ ಹೇಳಿದರು. ನಮಗೆ ಇಲ್ಲಿ ಪ್ರಥಮ ಬಾರಿಗೆ ಜಮಾಅತಿನ ವಿಷಯ ತಿಳಿಯಿತು. ಖಲೀಫತುಲ್ ಮಸೀಹರ ವ್ಯಕ್ತಿತ್ವವನ್ನು ಕಂಡು ಮತ್ತು ಅವರ ಭಾಷಣಗಳನ್ನು ಕೇಳಿ ಬೈಅತ್ ಮಾಡುವ ನಿರ್ಣಯ ಕೈಗೊಳ್ಳಲು ಯಾವ ಆತಂಕವು ಕಂಡು ಬಂದಿಲ್ಲ. ನಮಗೆ ಈ ಭಾಗ್ಯ ದೊರೆತದ್ದು ತುಂಬ ಸಂತೋಷದ ವಿಷಯವಾಗಿದೆ. ನಾವು ಮರಳಿ ಹೋಗಿ ನಮ್ಮ ಎಲ್ಲ ಮಿತ್ರ ಬಳಗಕ್ಕೆ ಅಹದಿಯತ್ತಿನ ಸಂದೇಶ ತಲುಪಿಸುವೆನು.

* ಓರ್ವ ಸೀರಿಯನ್ ಯುವಕ ಬೈಅತ್ ಮಾಡಿ ಮನೆಗೆ ಮರಳಿದಾಗ ಅವರ ಚಿಕ್ಕಪ್ಪ ಜಮಾಅತ್ ಮತ್ತು ಜಲ್ಸದ ಬಗ್ಗೆ ಅವರಿಂದ ವಿಚಾರಿಸಿದರು. ಆ ಯುವಕ ಜಲ್ಸದಲ್ಲಿ ಕೇಳಿದ ಮಾತುಗಳನ್ನು ಮತ್ತು ಅಹ್ಮದಿಯಾ ಜಮಾಅತಿನ ವಿಶ್ವಾಸಗಳ ಬಗ್ಗೆ ಕೇಳಿದ್ದೆಲ್ಲ ವಿವರಿಸಿದೆನು. ಜಲ್ಸದ ಮರುದಿನವೇ ಅವನ ಫೋನು ಬಂತು. ನನ್ನ ಚಿಕ್ಕಪ್ಪ ಸಹ ಅಹ್ಮದಿಯತ್ತಿನಲ್ಲಿ ಸೇರಬಯಸುತ್ತಾರೆ. ಅವರು ಹೇಳುತ್ತಾರೆ. ಅಹ್ಮದಿಯತ್ತಿನ ಸತ್ಯತೆಯಲ್ಲಿ ಯಾವ ಸಂಶಯವೂ ಇಲ್ಲ. ನಾನು ತಕ್ಷಣ ಈ ಪವಿತ್ರ ಜಮಾಅತಿನಲ್ಲಿ ಸೇರ ಬಯಸುತ್ತೇನೆ.

* ಓರ್ವ ಮಿತ್ರರಾದ ERVIN XHEPA ಸಾಹಿಬ್ ತಮ್ಮ ಪತ್ನಿಯ ಜೊತೆ ಜಲ್ಸದಲ್ಲಿ ಭಾಗವಹಿಸಿದ್ದರು ಇವರಿಬ್ಬರೂ ಕಾನೂನು (Law) ವಿಭಾಗಕ್ಕೆ ಸೇರಿದವರಾಗಿದ್ದರು. ಅದಾಗ್ಯೂ ಅವರ ಪತ್ನಿ ಜಲ್ಸದಲ್ಲಿ ಭಾಗವಹಿಸುವ ಮುಂಚೆ ಬೈಅತ್ ಮಾಡಿರಲಿಲ್ಲ. ಆದರೆ ಅಲ್‌ಹಮ್ದುಲಿಲ್ಲಾಹ್ ಜಲ್ಸದಲ್ಲಿ ಭಾಗವಹಿಸಿ ಹುಝೂರ್ ಅನ್ವರ್(ಅಬಿಅ) ರೊಡನೆ ಭೇಟಿಯ ನಡುವೆಯೇ ಅವರು ಅಹ್ಮದಿಅತ್ ಸ್ವೀಕರಿಸುವ ಘೋಷಣೆ ಮಾಡಿದರು. ಅವರು ಹೇಳುತ್ತಾರೆ. ಜಲ್ಸ ಸಾಲಾನದ ಅನುಭವಗಳು ಅತ್ಯಂತ ಅಸಾಮಾನ್ಯದ್ದಾಗಿದ್ದವು. ಯಾವ ರೀತಿಯ ಪ್ರೀತಿ, ಆತ್ಮೀಯತೆ ಮತ್ತು ನಿಸ್ವಾರ್ಥತೆಯ ವರ್ತನೆಯನ್ನು ನಾನು ಕಂಡಿರುವೆನು. ಅದರ ಅಸಾಮಾನ್ಯ ಪ್ರಭಾವ ನನ್ನ ಮನದಲ್ಲಿ ಬೀರಿದೆ.

ಅವರು ಇನ್ನು ಬೈಅತ್ ಮಾಡಿರಲಿಲ್ಲ ಎಂದು ತಿಳಿದು ಹುಝೂರ್ ಹೇಳಿದರು. ವಕೀಲಿ ಆದವರಿಗೆ ಮನ್ನಿಸಲು ಪುರಾವೆಗಳನ್ನು ಒದಗಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ ನಿಮ್ಮ ಪತಿಯು ನಿಮಗೆ ಬಲವಾದ ಪುರಾವೆಗಳನ್ನು ಒದಗಿಸಿ ಮನ್ನಿಸಬೇಕಾಗಿದೆ. ಆಗ ಅವರು ಹೇಳಿದರು. ನನ್ನ ಪತಿ ಜಮಾಅತಿನ ವಿಷಯದಲ್ಲಿ ನನಗೆ ಬಹಳಷ್ಟು ತಬ್ಲೀಗ್ ಮಾಡಿದ್ದಾರೆ. ಮತ್ತು ನಾನು ತುಂಬ ದೀರ್ಘ ಅವಧಿಯಿಂದ ತನ್ನ ಮನದಲ್ಲಿಯೇ ಅಹ್ಮದಿಯತ್ ಸ್ವೀಕರಿಸಿದ್ದೆ. ಆದರೆ ಇಂದು ಪರಿಪೂರ್ಣ ವಿಶ್ವಾಸದಿಂದ ಅಹ್ಮದಿಯಾ ಜಮಾಅತನ್ನು ಸ್ವೀಕರಿಸುತ್ತೇನೆ. ಆ ಸಮಯ ಅವರ ಕಣ್ಣುಗಳಿಂದ ಭಾಷ್ಪ ಸುರಿಯುತ್ತಿತ್ತು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.